(ಬಿ) ವಿದೇಯಕಗಳನ್ನು ಪರ್ಯಾಲೋಚಿಸುವುದು ಮತ್ತು ಅಂಗೀಕರಿಸುವುದು.

ಕರ್ನಾಟಕ ಕಾವೇರಿ ಜಲಾನಯನ ಪ್ರದೇಶ ನೀರಾವರಿ ಸಂರಕ್ಷಣಾ ವಿಧೇಯಕ 1991

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು) : ಮಾನ್ಯ ಉಪಾಧ್ಯಕ್ಷಿಣಿಯವರೇ, ಈಗಾಗಲೇ ನಾನು ಪ್ರಸ್ತಾಪವನ್ನು ಮಂಡಿಸಿದ್ದೇನೆ. ಇದನ್ನು ಈ ಸದನವು ಸರ್ವಾನುಮತದಿಂದ ಪಾಸು ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

+ ಶ್ರೀ ಡಿ.ಬಿ. ಚಂದ್ರೇಗೌಡ (ವಿರೋಧ ಪಕ್ಷದ ನಾಯಕರು) : ಮಾನ್ಯ ಉಪಾದ್ಯಕ್ಷಿಣಿಯವರೇ, ಕರ್ನಾಟಕ ಕಾವೇರಿ ಜಲಾನಯನ ಪ್ರದೇಶ ನೀರಾವರಿ ಸಂರಕ್ಷಣಾ ವಿಧೇಯಕ, 1991ನ್ನು ಸ್ವಾಗತಿಸುತ್ತಾ ಕೆಲವು ಅನಿಸಿಕೆಗಳನ್ನು ಹೇಳಬೇಕು ಎಂದು ಹೇಳಿ ತಮ್ಮ ಅನುಮತಿಯನ್ನು ಕೇಳುತ್ತಿದ್ದೇನೆ. ಇದು ಒಂದು ಐತಿಹಾಸಿಕವದಂಥ ಮಸೂದೆ. ನಾನು ಐತಿಹಾಸಿಕ ಮಸೂದೆ ಎಂದು ಕರೆಯುವಾಗ ನನ್ನ ನೆನಪಿನಲ್ಲಿ ಅಥವಾ ಅನುಭವದಲ್ಲಿ ಇಂಥ ಮಸೂದೆಯೊಂದು ಶಾಸನಸಭೆಯಲ್ಲಿ ಚರ್ಚೆಯಾದಂಥದ್ದು ಹಿಂದಿನ ಅನುಭವಗಳಿಂದ ನೋಡಿದರೆ ಇಲ್ಲ. ಇದು ಒಂದು ವಿಶೇಷ ಮಸೂದೆಯನ್ನು ತರತಕ್ಕಂಥ ಧೈರ್ಯವನ್ನು ಪ್ರದರ್ಶನ ಮಾಡಿದಂಥ ಸರ್ಕಾರಕ್ಕೂ ಕೂಡಾ ನಾನು ಈ ಮೂಲಕ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಇವತ್ತು ರಾಷ್ಟ್ರದಲ್ಲಿ, ಒಟ್ಟಾರೆ ರಾಜ್ಯಗಳು ಕೇಂದ್ರದ ದೃಷ್ಟಿಯಿಂದ ನೋಡುವಾಗ ರಾಜ್ಯ ಮತ್ತು ರಾಷ್ಟ್ರ ಸರ್ಕಾರಗಳು ಸಾಮಂತರ ರಾಜರ ತರಹ ನಡೆದುಕೊಳ್ಳತಕ್ಕಂಥ ಒಂದು ಪ್ರವೃತ್ತಿಯನ್ನು ಇತ್ತೀಚೆನೆ ದಿನಗಳಲ್ಲಿ ಬಹಳವಾಗಿ ನೋಡುತ್ತಿದ್ದೇವೆ. ಆದರ ಏರಿಯಾಸನ್ನು ವಿಸ್ತಾರವಾಗಿ ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ಇವತ್ತು ನಮ್ಮ ರಾಷ್ಟ್ರ ಬಹುತೇಕ ಸಮಸ್ಯೆಗಳಿಗೆ ಇಂಥ ಪರಿಸ್ಥಿತಿ ಕೂಡಾ ಕಾರಣ ಎಂದು ಗಮನದಲ್ಲಿಟ್ಟುಕೊಂಡರೆ ಮುಂದೆ ಚರ್ಚೆ ಒಳ್ಳೆಯದಾಗಬಹುದು ಎಂದು ನಾನು ಭಾವನೆಯನ್ನು ಮಾಡತ್ತೇನೆ. ಇದಕ್ಕಾಗಿ ಒಂದು ಕಮೀಷನ್ ಕೂಡಾ ನೇಮಕವಾಯಿತು. ಇವೆಲ್ಲಾ ಇಲ್ಲ ಅಗತ್ಯವಿಲ್ಲ.

ಆದರೆ ಇಂತಹ ಒಂದು ಮಸೂದೆ ಬರೀ ಮಂಡನೆಯಿಂದಲೇ ಕಾವೇರಿ ಜಲನಯನ ಪ್ರದೇಶದ ಜನರಿಗೆ ತಮ್ಮ ಹಕ್ಕು ಮತ್ತು ಆದ್ದರಿಂದ ಲಾಭ ದೊರೆಯುತ್ತದೆಂದು ನೀನೇನು ಭಾವನೆ ಮಾಡಿಲ್ಲ. ಮಸೂದೆಯನ್ನು ಮಾಡುವುದರ ಜೊತೆಯಲ್ಲಿಯೇ ಈ ಮಸೂದೆಯನ್ನು ಜಾರಿಗೆ ಕೊಡುವುದಕ್ಕೆ ಬೇಕಾಗಿರತಕ್ಕಂಥಹ ಕ್ರಮಗಳನ್ನು ಕೈಗೊಳ್ಳಬೇಕು. ಇದನ್ನು ಆಡಳಿತಾತ್ಮಕವಾದ ಕ್ರಮ ಇರಬಹುದು ಅಥವಾ ಅನುಷ್ಠಾನಕ್ಕೆ ಬೇಕಾಗಿರತಕ್ಕ ಆರ್ಥಿಕ ಸಮರ್ಥ್ಯವನ್ನು ಪಡೆತುಕೊಳ್ಳತಕ್ಕ ಪ್ರಶ್ನೆ ಇರಬಹುದು. ಇಲ್ಲವೇ ನಮ್ಮಹಿತವನ್ನು ಕಾಪಾಡುವುದಕ್ಕೆ ಉಳಿದ ಎಲ್ಲವನ್ನು ಬದಿಗೊತ್ತಿ ಇದೊಂದು ಕಾಯಕ ಎಂದು ಹೇಳಿ ಇದನ್ನು ಕೈಲಾಸವಾಗಿಸತಕ್ಕ ಒಂದು ಕಾರ್ಯವನ್ನು ಈ ಸರ್ಕಾರದಿಂದ ನಾನು ನಿರೀಕ್ಷೆ ಮಾಡುತ್ತೇನೆ. ಈ ಒಂದು ವಿಧೇಯಕ ಜಾರಿಗೆ ಬಂದಂಥಹ ಸ್ಥಿತಿ ನಮ್ಮ ರಾಜ್ಯದ ಹಿತಕ್ಕೆ ಮಾರಕವಾಗತಕ್ಕ ರಾಜ್ಯದ ಕಾವೇರಿ ಜಲಾಷನಯದ ಪ್ರದೇಶದ ರೈತರ ಸಾವಿನೊಂದಿಗೆ ಸರಸವಾಡತಕ್ಕ ಮತ್ತು ಆಧುನಿಕ ರೈತಾಪಿ ವರ್ಗಕದ ಅತ್ಯಂತ ಅವಶ್ಯಕತೆಯಾದಂತಹ ನೀರಿನ ಮೇಲೆ ನಮಗಿರತಕ್ಕಂಥಹ ಹಕ್ಕನ್ನು ನಿರಾಕರಿಸುವಂತಹ ಒಂದು ಸನ್ನಿವೇಶದಲ್ಲಿ ಈ ಮಸೂದೆಯನ್ನು ಸರ್ಕಾರ ತಂದಿದೆ ಎಂದು ಹೇಳಿ ನಾನಾದರೂ ಭಾವನೆ ಮಾಡುತ್ತೇನೆ. ಮೂಲಭೂತವಾಗಿ ಈ ಮಸೂದೆಯನ್ನು ತರುವ ಅಧಿಕಾರ, ಹಕ್ಕು

ಈ ಶಾಸನ ಸಭೆಗೆ ಇದೆಯೇ ಎನ್ನತಕ್ಕದ್ದನ್ನು ಮೊದಲು ನಾವು ಚರ್ಚಿಸಬೇಕಾದ ಅಂಶ ರಾಜ್ಯಾಂಗದ ಷೆಡ್ಯೂಲ್ 7ರಲ್ಲಿ ಪಾರ್ಟ್ 2 ಎಂಟ್ರಿ 17ರಲ್ಲಿ ನಮ್ಮ ಅಧಿಕಾರವನ್ನು ಪ್ರಸ್ತಾಪ ಮಾಡುತ್ತಾ "Water that is to say, water suplies, irrigation and canals, drainage and embankments, water storage and water power subject to the provisions of entry 56 of List I."

ಈ ಮಸೂದೆ ನಾವು ಇಲ್ಲಿ ಮಂಡನೆಯಾಗುವುದಕ್ಕೆ ಮುನ್ನ ರಾಜ್ಯಪಾಲರ ಅಧ್ಯಾದೇಶದ ಮೂಲಕ ಈ ರಾಜ್ಯದ ಜನರಿಗೆ ನಾವು ನಮ್ಮ ಶಾಸನದ ವ್ಯಾಪ್ತಿಯೊಳಗೆ ನಮಗೆ ಇರತಕ್ಕ ಅಧಿಕಾರವನ್ನು ಬಳಸಿ ಒಂದು ಶಾಸನವನ್ನು ಮಾಡುತ್ತೇವೆನ್ನತಕ್ಕ ಅತ್ಯಂತ ದೊಡ್ಡ ಜವಾಬ್ದಾರಿ ಮಾತನ್ನು ನಮ್ಮ ಶಾಸನದ ಮೂಲಕ ಹೇಳಿದ್ದೇವೆ. ಆಗಲೂ ಒಂದು ಪ್ರಶ್ನೆ ಬಂತು ರಾಜ್ಯಾಂಗದ 213 ಸಬ್‌ಸೆಕ್ಷನ್ (ಎ) ನಲ್ಲಿ ರಾಜ್ಯಪಾಲರು ಈ ಮಸೂದೆಯನ್ನು ನಮ್ಮ ಮಂತ್ರಿಮಂಡಲದ ಸಭೆ ಒಪ್ಪಿಗೆಗಾಗಿ ಒತ್ತಾಯ ಮಾಡಿದ್ದಾಗ ಒಪ್ಪಿಗೆ ಕೊಟ್ಟಿದ್ದು ಸರಿಯೇ ಅನ್ನತಕ್ಕ ಪ್ರಶ್ನೆ ಕೂಡ ಚರ್ಚೆಯಾಯಿತು ನಾನು ಅದರ ವಿವರಕ್ಕೆ ಹೋಗುವುದಿಲ್ಲ, ಆದರೆ ಇಲ್ಲಿ ಒಂದು ಮಾತನ್ನು ಹೇಳಿದರು Under Article 213 (a) the Governor is bound to seek instructions of the President to prumolgate an Ordinance only under the circumstances stated in the proviso to Clause 1 of Article 213 of the Constitution. ಏನು contingencies ಇದೆ ಅದರಲ್ಲಿ?

There are two or three constraints laid down under Article 213 "When a bill for the same purpose would have required the previous sanction of the President" and I don't think in this bill, the previous sanction of the President was necessary. The previous sanction is needed under Article 304 of the Constitution in the case of law touching the trade or the commerce.So the present ordinance is not such a law connected with or touching the trade or the commerce. The second circumstance would have been where a bill for the same purpose would have needed the assent of the president in the present case no such assent is needed and the need for such assent will arise only in the case of law made by the state legislature on a subject in the concurrent list and such legislation is repugnant to some law made by the parliament or existing law. So, the existing law is defined by the constitution, to be a law made before the Constitution. So, since Article 254 of the Constitution is not attracted the need for assent of the president in this case does not arise, Consequently, there is no need to to obtain the instructions of the instrucions of the President under the present provision. Thirday a bill can be reserved by the Government under clause (b) of the provisio to claces (1) of Article 213 of the Constitution of India, if he deems it to be necessary. Where the entries invoked or those falling entirely in the State list invariably the Governor will give the assent. Where the constitutional poser to issue

ordinance is not doubted there is no need to seek instructions of the President., this is not a case where the sanction of the President under the Article 304 is required or the law is to deregate the powers of the High. Court. Therefore, Government was well with in his competence to concur with the opinion expressed by the State Cabinet while explaining a necessity for that particuler ordinance. Now coming to the legislative business, ordinance promulgated is under this article should have the same force of law. I need not go into that because the matter is pending at the highest a pex court of the country and the land. So, I thoght that I should try to go into such small details of the constitutional aspects of the matter. The power to issue the ordinance is Coextensive with the power to make the law on the same subject. There are umpteen number of decisions on this point. AIR I quote 1979 SC 1550, & AIR 1952 SC 710. These conclusively give the power of legislation to the Governor in the absence of House in session. Now the House being in session, what is the procedure to be followed? Are we well with in the provisions of Art.213(2) sub-clause (a) "shall be laid before the Legislative Assembly of the State" We have done it. or where there is a Legislative Council in the State before both the Houses shall cease to operate at the expiration of six week from the re-assembly of the Legislature or before the expiration of that period a resolution disapproving it is passed by the legislative Assembly and agreed to by the Legislative Council, if any upon passing of the resolution as the cause may be, on the resolution being agreed to by the Council. Therefore, we are well within the provisions of article 213 and I find no reason to question either the competency of the Governor or the legisaltive authority and competence of this House to legislate on these matters. Coming to the important aspect of the matter with reference to the power and competency of the State, certain reservations have been expressed, at the time when ordinance was promulgated, to the effect whether the state has a power, authority and competence on the

subject.To my limited knowledge of the Contitution I feel that we are well within the scope of schedule VII List-II Entry-17 of the Constitution. Entry-17 of schedule II is guided by Entry 56 of Schedul VII.

I would submit that though entry 17 is subject to entry-56 of the List-I the Union List, only when a declaration by Parliament made by law that a particular kind of regulation or control or a given ativity is necessary. if you look to the provisions of Schedule VII List,-I Entry-56, Ifind thereis no particular direction or declaration by the Parliament under Entry-56. there fore, in the absence of such a declaration made under the Interestate Water dispute Act of 1956 I feel we are well within the Constitutional framework laid down in Schedule VII of List-II and the question could be also discussed about the River Board Act or River Board.

ANNOUNCEMENT

MADAM DEPUTY SPEAKER: I am happy to announce that the Secretary. General, of Commonwealth Parliamentary Hon. David Tonkin and his wife are Stated in the distinguished Press Gallery in the House. On behalf of each and every one of you and on my own behalf I extend a hearty welcome to both of them.

SRI D.B. CHANDRAGOWDA: Madam I too join the sentiments expressed and I welcome him. He has graced this House by his presence. I hope that for his benefit I would like to do my deliberations to the extent possible in English, practically I am doing so. Madam I was referring to Entry-17 List-II of 7th Schedule of the Constitution of India, about the constitutional competence of this House to pass a bill, which is before us, for the consideration of the House. What I was trying to bring home is, in the absence of any declaration made under the existing Water Disputes Act, 1956 we are well with in the reasonable limits of the Constitution to enact such a legislation. Secondly a question could have been raised as to the River Board Act. The River Board Act also could have been one of the impediments in passing this legislation. this River Board Act is constituted at various river basins. But fortunately, we don't have such Act as River Board Act applicable to the Cauvey basin area. The second question could have been is, Entry-14 relating to Agriculture, Entry-18 relating to Land area also not covered or does not bar making such a law be fore us.

There fore I am fully satisfied that the Bill is well within the purview of the Indian Constitution. The bill is well within the purview of legislative competence of this House and fightly the State Government has taken a right decision at aright time and the Hon. Govenor has rightly issued an ordinance under his competence under Article 213 of the Constitution. Therefore, while welcoming this historic legislation, which is under discussion tabled by the Government to-day, I do not ant to go into the details or merits of the case since the matter is cealed by the highest Court of the land, the Supreme Court of India and also the highest Court of the State, the High Court of Karnataka. Therefore, I don't want to go into the merits of the case. I would confine muself to the fact that this was necessary, timely, in good taste and also to assert the States are not subordinate in every respect, though, we have the Union List, State List and Concurrent List. We do have legislative powers well within the constitution covered under Entry 17 of the State List.

Now, the question is, I would like to know from the Government as to when the Bill introduced in the original Bill or at the time of promulgatation of ordinance, the competence of the Court was also brought in within the purview of the Bill present before us. Now why the Government is thinking in terms of amending the Bill introduced and remover or keep the Court outside the jurisdiction or outside the purview of this Bill. The very purpose of the Bill itself, according to me is, to see that the rights which we accrue under certain provisions to have the benefit of the resources we have, though used by the state without interfering either by the Court or by the Central Government or by any other Acts, either enacted or going to be enacted in the later stage. If that the case, then I do not think that it is right on the part of the Government to keep the Courts away from the jurisdiction of this Bill and no explanation is sought so far. I am of the view or I am drawing the inference that you are trying to move an amendment to the Bill keeping the jurisdiction of the courts away you have already given Notice. Anyway I do not find any rational behind this move. I would like to have the clear view of the Government on this particular point. Now coming to the other aspect of the matter the Superme Court while trying to adjudicate this dispute between Tamilnadu and Karnataka or Kerala or Pondicharry, the Apex Court of the country has offered to negotiate to sortout or solve this problem. This is very welcome move. We should have immediately responded I hope the Government or Karnataka has

relsponded. I did welcome the move of the Supreme Court of India and hope that they would take the cue. The· states involved in the dispute would also take this inthe right spirit and come to negotations table, specially, with reference to Cauvery Water Dispute which is pending for quite some time. It is almost a century we began deliberations. The negotiated settliment as we call the Agreement ot 1892 and we are negotiating the same issue almost after a century. I am happy that the Government of Karnataka has taken a positive view on the difections of the Supreme Court. I hope the rest of the States will also follow the suit.

Before concluding I would appeal to the Government to bring in one more such legislation with reference to Krishna Basin also under Bachawat Award they have formed two schemes Scheme-A and Scheme-B. We are going on implementing the Irrigaiton Projects basing on SchemeËA. But so far the SchemeËB has not been nofified by the central Government nor Gazetted. on the country, the Interim order issued by the Tribunal is being pressurised by the Tamilnadu government to Gazette it. I appeal to the state Government to take up the issue in right earnestness and see that either the Scheme-B under Bachawat Award is Gazetted or a legislation of the type covering the Cauvery Basin area also to be enunciated to cover Krishna Basin area also.

With these words I welcome the Bill. I thank you for giving me an opportunity to say a few words on this Bill. Once again I conclude congratulating the Government and appeal to the Government to see that sufficient finances either by raising Irrigation Bonds or stopping some developmental work and diverting the money are provided in order to complete the Cauvery Basin projects. The entire water which we want to utilise by taking power under this Act is pushed through in a proper manner and in a way that the people desire.

+ ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಅಧ್ಯಕ್ಷರೇ ಈ ಕಾವೇರಿ ಜಲಾನಯನ ಸಂರಕ್ಷಣೆಯ ವಿಧೇಯಕವನ್ನು ನಾನು ಮುಕ್ತಕಂಠದಿಂದ ಸ್ವಾಗತಿಸುತ್ತೇನೆ. ಸರ್ಕಾರ ಈ ಬಗ್ಗೆ ಬಹಳ ಪರಿಣಾಕಾರಿಯದಂಥ ಹೆಜ್ಜೆಯನ್ನು ಇಟ್ಟಿದೆ. ಒಂದು ಸುಗ್ರೀವಾಜ್ಞೆಯನ್ನು ತರುವ ಮೂಲಕ ಆ ಒಂದು ದಿಟ್ಟನಿಲುವನ್ನು ಸರ್ಕಾರ ಪ್ರದರ್ಶಿಸಿದ್ದು ಈಗ ಅದು ವಿಧೇಯಕವಾಗಿ ಈ ಸದನದಮುಂದೆ ಮಂಡಿತವಾಗಿದೆ. ಈ ಸದನದಲ್ಲಿ ಕಾವೇರಿ ನೀರಿಗೆ ಸಂಬಂಧಪಟ್ಟ ಹಾಗೆ ನ್ಯಾಯ ಮಂಡಲಿ ಬೇಕೆ ಬೇಡವೆ ಎನ್ನತಕ್ಕಂಥದ್ದು ಅನೇಕ ಸಂದರ್ಭದಲ್ಲಿ ಚರ್ಚೆಯಾಗಿ

ನ್ಯಾಯ ಮಂಡಲಿ ಬೇಡವೆನ್ನತಕ್ಕಂಥ ಮಾತನ್ನು ಈ ಸದನದಲ್ಲಿ ಗಂಭೀರವಾಗಿ ಸರ್ಕಾರಕ್ಕೆ ಬೆಕ್ಕಾಯಿತು ಮಾಡಿದ್ದೆ. ಆದರೂ ಕೂಡ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಆ ಸೂಚನೆಯನ್ನು ಸರ್ಕಾರ ಒಪ್ಪಿಕೊಂಡಿತ್ತು. ಆದರೆ ಮಧ್ಯಂತರದ ಆಜ್ಞೆ ಕನ್ನಡಿಗರ ಕೈಯಲ್ಲಿ ಸಿಕ್ಕಿದಂತಾಗಿ ಕರ್ನಾಟಕದ ರೈತರು ಬಹಳ ಚಿಂತಾಜನಕ ಸ್ಥಿತಿಯಲ್ಲಿ ಸಿಕ್ಕಿದಂಥ ಪರಿಸ್ಥಿತಿ ಉಂಟಾಯಿತು. ರಾಜ್ಯ ಸರ್ಕಾರ ಈ ವಿಚಾರದಲ್ಲಿ ಯಾವುದೇ ಒಂದು ರಾಜಕೀಯವನ್ನು ಬೆಳೆಸದೆ ವಿರೋಧಪಕ್ಷಗಳ ಜೊತೆಯಲ್ಲಿ ವಿಚಾರದಲ್ಲಿ ಸಮಗ್ರವಾಗಿ ಆಗಿದ್ದಾಗ್ಗೆ ಚಿಂತನೆಯನ್ನು ಮಾಡಿದರು. ಇದಕ್ಕಾಗಿಯೇ ಒಂದು ಉಪತಾವಾದಂಥ ಸಮಿತಿಯನ್ನು ಕೂಡ ಸೂಚಕ ಮಾಡಿದರು. ಈ ಸಭೆಯ ಸಭೆಯನ್ನು ಕೂಡ ಆಗಿದ್ದಾಗ್ಗೆ ಕರೆದು ಸಮಿತಿಯ ಸಲಹೆಗಳನ್ನು ಪಡೆದುಕೊಂಡು ವಿಧ್ಯಸಚಿವರಾದ ಶ್ರೀ ವೀರಪ್ಪಮೊಯಿಲಿ ಯವರು ಕೂಡ ಅಪಾರವಾದ ಆಸಕ್ತಿಯನ್ನು ವಹಿಸಿ ಈ ಒಂದು ಕಾವೇರಿ ನೀರಿನ ಹಂಚಿಕೆಯಲ್ಲಿ ಕರ್ನಾಟಕಕ್ಕೆ ನ್ಯಾಯ ದೊರಕಲೇಬೇಕು ಎನ್ನತಕ್ಕಂಥ ವಿಚಾರದಲ್ಲಿ ಒಂದು ಪ್ರಾಮಾಣಿಕವಾದ ಪ್ರಯತ್ನವನ್ನು ಮಾಡಿದ್ದಾರೆ. ಮತ್ತು ಅವರು ನಮ್ಮ ಮುಖ್ಯಮಂತ್ರಿಗಳಾದ ಶ್ರೀಮಾನ್ ಬಂಗಾರಪ್ಪನವರ ಧೈರ್ಯವನ್ನು ಮೆಚ್ಚತಕ್ಕಂಥದ್ದು. ಯಾವುದೇ ರಾಜಕೀಯದಲ್ಲಿ ನಮಗೂ ಅವರಿಗೂ ಭೇದ ಬಹುಶಃ ಇರಬಹುದು. ಈ ಸಭೆಯಲ್ಲಿ ಅನೇಕ ವಿಚಾರಗಳನ್ನು ಒಪ್ಪಿರಬಹುದು. ಒಪ್ಪಿರಬಹುದು. ಇದು ರಾಜಕೀಯದಲ್ಲಿ ಸಾಧಾರಣದವರು ಮಾಡತಕ್ಕಂಥದ್ದಲ್ಲ ಅಂಥ ಕೇಂದ್ರ ಸರ್ಕಾರವೇ ನಮ್ಮನ್ನು ಏನು ನೋಡುತ್ತಿರತಕ್ಕಂಥ ಪರಿಸ್ಥಿತಿಯಲ್ಲಿ ಅವರ ವಿಚಾರಧಾರೆಗಳನ್ನು ಬದಿಗಿಟ್ಟು ಹಾಕಿಕೊಂಡು ಮತ್ತು ಇವರದೇ ಆದಂತಹ ಸರ್ಕಾರ ಅಲ್ಲಿ ಇರುವಾಗ ಯಾವ ಚಿಂತನೆಗೂ ಅಭಿಪ್ರಾಯಕ್ಕೂ ಅವಕಾಶವನ್ನು ಕೊಡದೆ ಇಲ್ಲಿ ಒಂದು ಸುಗ್ರೀವಾಜ್ಞೆಯನ್ನು ತಂದಂಥದ್ದು ನಿಜವಾಗಿಯೂ ಕೂಡ ಮೆಚ್ಚತಕ್ಕಂಥದ್ದು. ಇಂಥ ಸುಗ್ರೀವಾಜ್ಞೆಯಿಂದ ಕೇಂದ್ರ ಸರ್ಕಾರವು ಪಾಠಕಲಿಯಬೇಕಾಗುತ್ತದೆ. ಕೇಂದ್ರ ಏನು? ರಾಜ್ಯಗಳೇನು? ಕೇಂದ್ರಕ್ಕೂ ರಾಜ್ಯಕ್ಕೂ ಇರತಕ್ಕಂಥ ಸಂಬಂಧಗಳೇನು? ರಾಜ್ಯಕ್ಕೆ ಶಕ್ತಿ ಕೊಡಬೇಕು ರಾಜ್ಯದ ಆಡಳಿತವನ್ನು ಯಾವಾಗಲೂ ನಾವು ಕೇಂದ್ರದ ಮುಷ್ಟಿಯಲ್ಲಿ ಇಟ್ಟುಕೊಳ್ಳತಕ್ಕ ಒಂದು ವಿಚಾರ ಸರಿಯೇ ತಪ್ಪೇ ಎನ್ನತಕ್ಕಂಥ ಚಿಂತನೆ ನಡೆಯಬೇಕಾಗಿದೆ. ರಾಜ್ಯಕ್ಕೆ ಎಷ್ಟು ಅಧಿಕಾರ ಇರಬೇಕು ಕೇಂದ್ರಕ್ಕೆ ಎಷ್ಟು ಅಧಿಕಾರವಿರಬೇಕು ಎನ್ನುವ ಬಗ್ಗೆ ಈವತ್ತು ಸಮಗ್ರವಾದ ಚಿಂತನೆಯಾಗಬೇಕು. ಈಗಾಗಲೇ ಕೇಂದ್ರ ಮತ್ತು ರಾಜ್ಯಗಳ ಆಡಳಿತದ ಬಗ್ಗೆ ಸಕಾರಾತ್ಮಕವಾದ ಚಿಂತನೆ ಮಾಡಿ ಒಂದು ಪದವಿಯನ್ನು ಕೊಟ್ಟಿದ್ದಾರೆ. ಕೇಂದ್ರದ ದೃಷ್ಟಿಯಲ್ಲಿ ರಾಜ್ಯಗಳು ಅಂದರೆ ಒಂದು ರೀತಿಯಲ್ಲಿ ಅವರು ಪಾಳೆಯಗಾರರು ಇದ್ದಹಾಗೆ ನಾವು ಅವರಿಗೆ ಕಪ್ಪ ಕಾಣಿಕೆ ಕೊಡತಕ್ಕಂಥ ಜನರು ಇದ್ದಹಾಗೆ ಇಂಥ ಪ್ರಶ್ನೆ ಬರಬಾರದು ಅವರಿಗೆ. ಕೇಂದ್ರ ಸರ್ಕಾರ ಒಂದು ರಾಜ್ಯದ ಪ್ರಶ್ನೆ ಇಂದಾಗ ಬಹಳ ಗಂಭೀರವಾಗಿ ಚಿಂತನೆ ಮಾಡಬೇಕು. ಮೊದಲಿನಿಂದಲೂ ಕೇಂದ್ರ ಸರ್ಕಾರ ಇಂಥ ಅನೇಕ ಸಮಸ್ಯೆಗಳು ಬಂದಾಗ ಬೇರೆಬೇರೆ ರಾಜ್ಯಗಳನ್ನು ಕಡೆಗಣಿಸಿದ್ದಾರೆ. ಅವರು ಕಡೆಗಣಿಸಿರತಕ್ಕ ಪರಿಸ್ಥಿತಿಯಲ್ಲಿ ರಾಜ್ಯಗಳಲ್ಲಿ ನಾವು ಯಾವ ದೃಷ್ಟಿಯಲ್ಲಿ ಕೇಂದ್ರ ಸರ್ಕಾರವನ್ನು ನೋಡಬೇಕೆಂಬ ಚಿಂತನೆ ಉದ್ಭವವಾಗುತ್ತಿದೆ. ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರದ ಮೇಲೆ ಒತ್ತಡವನ್ನು ತಂದು ಅಧಿಕಾರ ಸೂತ್ರವನ್ನು ಹಿಡಿದುಕೊಳ್ಳತಕ್ಕ ಮುಷ್ಟಿಯಲ್ಲಿ ಹೋಗುತ್ತಿದ್ದರೆ ನಸೆಗನ್ನಿಸುತ್ತದೆ ಈ ಸಂಬಂಧಗಳಲ್ಲಿ ಬಿರುಕು ಉಂಟಾಗುತ್ತದೆ. ಈವತ್ತು ನಾವು ಏನು ವಿಧೇಯಕವನ್ನು

ತರುತ್ತಿದ್ದೇವೆ. ಇದರ ಬಗ್ಗೆ ನಿಜವಾಗಿಯೂ ಇಡೀ ರಾಷ್ಟ್ರವೇ ಚಿಂತನೆ ಮಾಡಬೇಕಾದ ಪರಿಸ್ಥಿತಿ ಬಂದಿದೆ. ಇದು ಒಂದು ಚರ್ಚೆಯ ವಸ್ತುವಾಗಿದೆ. ದೇಶದಲ್ಲಿ ಎಲ್ಲಾ ರಾಜ್ಯಗಳು ಇದರ ಬಗ್ಗೆ ನಡೆಸಬೇಕು. ಚರ್ಚೆ ನಡೆಸಿ ಅಂತಿಮ ನಿರ್ಧಾರಕ್ಕೆ ಬರಬೇಕು. ಕೇಂದ್ರ ಅಂದರೆ ಏನು ಮತ್ತು ರಾಜ್ಯ ಅಂದರೆ ಏನು ನಮ್ಮಬ್ಬರ ಸಂಬಂಧವೇನು ಎಂಬ ಬಗ್ಗೆ ಅಂತಿಮ ತೀರ್ಮಾನಕ್ಕೆ ಬರಬೇಕಾದುದು ಅತಿ ಮುಖ್ಯವಾದ ಪ್ರಶ್ನೆ. ಅದನ್ನೇ ಇವತ್ತು ಕೇಂದ್ರ ಸರ್ಕಾರದವರು ನಾವು ಏನು ಮಾಡಬೇಕೆಂದು ಸುಪ್ರೀಂ ಕೋರ್ಟ್ ನವರನ್ನು ಕೇಳಿದ್ದಾರೆ. ಈ ಬರದ ಪರಿಸ್ಥಿತಿಯಲ್ಲಿ ಕೇಂದ್ರ ಸರ್ಕಾರ ಚಿಂತನೆ ಮಾಡತಕ್ಕ ಪರಿಸ್ಥಿತಿಯಲ್ಲಿ ಈ ಒಂದು ಕೆಲಸದಲ್ಲಿ ನಮ್ಮ ಈಗಿನ ರಾಜ್ಯ ಸರ್ಕಾರ ಮಾಡಿರುವಂತಹ ಕೆಲಸ ಅಭಿನಂದನೀಯ ಮತ್ತು ಶ್ಲಾಘನೀಯ ಇದು ನಿಜವಾಗಿಯೂ ಪೊಚ್ಚತಕ್ಕದ್ದು. ನಾನಾದರೂ ತಮಗೆ ಹೇಳುತ್ತಿದ್ದೇನೆ ಈವತ್ತು ಜಲಾನಯನದ ಪ್ರದೇಶ ನಮ್ಮ ರೈತರ ಬವಣೆ ಏನಾದೆ ಇದು ನಿಜವಾಗಿ ಕಣ್ಣೀರಿನ ಕಥೆ. ನಮಗೇ ನೀರಿಲ್ಲದೆ ಇರುವಾಗ ರೈತರಿಗೆ ತೊಂದರೆಯಾಗಿರುವಾಗ ತಮಿಳ್ನಾಡಿಗೆ ನೀರು ಕೊಡಬೇಕೆಂದು ಹೇಳುವುದು ಅತಿ ನಿಜವಾಗಿ ಯಾರೂ ಒಪ್ಪಿಗೆಯಿಟ್ಟತಕ್ಕದ್ದಲ್ಲ. ಯಾರೂ ಒಪ್ಪತಕ್ಕದ್ದಲ್ಲ. ಈ ಪರಿಸ್ಥಿತಿಯಲ್ಲಿ ನಾವು ಗಂಭೀರವಾಗಿ ಚಿಂತನೆ ಮಾಡಬೇಕಾಗಿದೆ. ರಾಜ್ಯ ಸರ್ಕಾರವೂ ಸಹ ಕಾವೇರಿ ಜಲಾನಯನ ಪ್ರದೇಶದ ಯಾವ ಯಾವ ಯೋಜನೆಗಳಿವೆ ಈ ಯೋಜನೆಗಳಿಗೆ ಇವರು ಇಟ್ಟಿರತಕ್ಕ ಹಣ ಏನಿದೆ ಇದು ಸಾಲದೂ. ಇವತ್ತು 20 ವರ್ಷಗಳಿಂದ ಆಂಕಿಅಂಶಗಳನ್ನು ತೆಗೆದುಕೊಂಡಾಗ ನೀರಾವರಿ ಯೋಜನೆಗಳಿಗೆ ನಾವು ಹೆಚ್ಚಿನ ರೀತಿಯಲ್ಲಿ ಗಮನ ಕೊಡುತ್ತಿಲ್ಲ. ಕಾಲಕಾಲಕ್ಕೆ ಸರಿಯಾಗಿ ಗಮನ ಕೊಡುತ್ತಿಲ್ಲ. ಪರಿಣಾಮಕಾರಿಯಾಗಿ ನಮ್ಮ ಯೋಜನೆಗಳು ಕಾಲಕಾಲಕ್ಕೆ ಮುಗಿಯಬೇಕಾಗಿದೆ. ಅದಕ್ಕೆ ಹಣದ ಕೊರತೆ ಇದೆ. ಈ ಹಣದ ಕೊರತೆಯನ್ನು ನೀಗುವುದಕ್ಕೆ ನಮ್ಮಲ್ಲಿ ಕುಳಿತು ಚಿಂತನೆ ಮಾಡಿ ಯಾವ ಬಾಬಿನಿಂದ ಹಣವನ್ನು ಕಡಿಮೆ ಮಾಡಬೇಕು, ಯಾವುದಕ್ಕೆ ಜಾಸ್ತಿ ಮಾಡಬೇಕೆಂದು ನೋಡಿ ಧೈರ್ಯವಾಗಿ ಕಾವೇರಿ ಯೋಜನೆಗಳ ಬಗ್ಗೆ ನೀವು ಹಿಂದು ಮುಂದು ನೋಡದೆ ಕೆಲಸ ಮಾಡಬೇಕು. ಈ ಸಂದರ್ಭದಲ್ಲಿ ಒಂದು ವಿಚಾರವನ್ನು ತಮ್ಮ ಗಮನಕ್ಕೆ ತರುತ್ತೇನೆ, ನಾಗಾರ್ಜುನ ಸಾಗರವನ್ನು ಕಟ್ಟುವಾಗ ಅಲ್ಲಿನ 4ನೇ ದರ್ಜೆ ನೌಕರರೂ ಸಹ ತಮ್ಮ ಸಂಬಳವನ್ನು ಬಿಟ್ಟು ನಾಗಾರ್ಜುನ ಸಾಗರವನ್ನು ಕಟ್ಟುಬೇಕೆಂದು ಶಪಥವನ್ನು ಮಾಡಿದರು. ನಮ್ಮ ರಾಜ್ಯದ ಜನತೆಗೂ ನಮ್ಮ ರಾಜ್ಯದ ಕೆಲಸಗಾರರಿಗೂ ನಮ್ಮ ರಾಜ್ಯದ ಸರ್ಕಾರಿ ನೌಕರರಿಗೂ ಹಾಗೂ ಕಾರ್ಮಿಕರಿಗೂ ಒಕ್ಕೂಟದಿಂದ ಕೇಳುತ್ತಿದ್ದೇನೆ ಈ ವಿಚಾರದಲ್ಲಿ ಅಂದರೆ ಕಾವೇರಿ ಯೋಜನೆಗಳು ಮುಗಿಯಬೇಕಾದರೆ, ಕೃಷ್ಣ ಯೋಜನೆಗಳು ಮುಗಿಯಬೇಕಾದರೆ ನಾವು ಹೆಗಲಿಗೆ ಹೆಗಲು ಕೊಟ್ಟು ಸರ್ಕಾರದ ಜೊತೆಯಲ್ಲಿ ನಿಂತು ಕೆಲಸ ಮಾಡಬೇಕಾದ ಪರಿಸ್ಥಿತಿ ಬಂದಿದೆ. ಯಾವುದೇ ಮಂಡಲಿ ಇರಬಹುದು, ಯಾವುದೇ ಆಜ್ಞೆ ಇರಬಹುದು, ಒರದು ತೆಗೆದು ಹನಿ ನೀರನ್ನು ಕಾವೇರಿ ನೀರನ್ನು ತಮಿಳ್ನಾಡಿಗೆ ಕೊಟ್ಟರೆ ತಂದರೆ ಪರಿಸ್ಥಿತಿ ಬಹಳ ಗಂಭೀರವಾದ ಪರಿಸ್ಥಿತಿ ಆಗುತ್ತದೆಂದು ಹೇಳುತ್ತಿದ್ದೇನೆ.

ಅದೇ ರೀತಿ ಕೃಷ್ಣ ಬಗ್ಗೆಯೂ ಎಚ್ಚರ ವಹಿಸಬೇಕು. ವರ್ಷಗಳು ಕಳೆಯುತ್ತವೆ, 2000 ವರ್ಷ ಬರುತ್ತದೆ. ಅಷ್ಟರೊಳಗೆ ನಮ್ಮ ಯೋಜನೆಗಳು ಏನು? ನೀವು ಕೃಷ್ಣಾಗೆ 150 ಕೋಟಿ ರೂಪಾಯಿಗಳನ್ನು ಇಟ್ಟಿದ್ದೀರಿ. ನೀವು ಈ ಪ್ರಕಾರ ಕಡಿಮೆ ಹಣ ಇಡುತ್ತಾ ಹೋದರೆ ನಿಮಗೆ 2000 ಇಸವಿಯೊಳಗೆ ಈ ಯೋಜನೆಗಳನ್ನು ಪೂರ್ಣ ಮಾಡುವುದಕ್ಕಾಗುವುದಿಲ್ಲ. ಪ್ರಾರಂಭದಲ್ಲಿ ಹೆಚ್ಚಿನ ಹಣವನ್ನು ಇಡಬೇಕಾಗಿದೆ.

ಹೆಚ್ಚಿನ ಹಣ ಇಡಬೇಕು ಮತ್ತು ಈ ಯೋಜನೆಗಳನ್ನು ಮುಗಿಸುವುದಕ್ಕೆ ಪರಿಣಾಮಕಾರಿಯಾದ ಕಾರ್ಯಕ್ರಮವನ್ನು ರೂಪಿಸಬೇಕು.

4-10 ಪಿ.ಎಂ

ಈ ಕಾರ್ಯಕ್ರಮಕ್ಕೆ ನೀವು ಕೈ ಹಾಕಬೇಕು ಇವತ್ತು, ಇದರ ಜೊತೆಗೆ ತಮಗೆ ನಾನು ಸಲಹೆ ಮಾಡುತ್ತಿದ್ದೇನೆ. ಹಿಂದೆ ಶ್ರೀಮಾನ್ ವೀರೇಂದ್ರ ಪಾಟೀಲರು ಮುಖ್ಯ ಮಂತ್ರಿಯಾಗಿದ್ದಾಗ ಮೂರು ಜನ ಮುಖ್ಯ ಮಂತ್ರಿಗಳು ಸೇರಿ, ಆಂಧ್ರ ಮತ್ತು ಮಹಾರಾಷ್ಟ್ರ ಹಾಗೂ ಕರ್ನಾಟಕ ಈ ಮೂರು ಜನ ಮುಖ್ಯಮಂತ್ರಿಗಳು ಸೇರಿ ಎರಡು ಸಾವಿರದ ಇಸವಿಯೊಳಗೆ ಈ ನೀರನ್ನು ಬಳಸಿಕೊಳ್ಳುವ ಬಗ್ಗೆ ಕುಳಿತು ಮಾತನಾಡಿ ಎರಡು ಸಾವಿರ ವರ್ಷದ ನಂತರವೂ ಸಹ ನಮಗೂ ನಿಮಗೂ ಯಾವುದೇ ತೊಂದರೆಯಾಗದ ರೀತಿಯಲ್ಲಿ ಪರಿಣಾಮಕಾರಿಯಾಗಿ ಕೆಲಸ ಮಾಡಬೇಕು ಎಂದು ಚಂತನೆ ಮಾಡಿ ಒಂದಲ್ಲ ಎರಡು ಸಭೆ ನಡೆಸಿದರು. ಇವತ್ತು ನಾನು ಅನೇಕ ಬಾರಿ ಈ ಸಭೆಯಲ್ಲಿ ಹೇಳಿದ್ದೇನೆ. ರಾಜ್ಯ ಸರ್ಕಾರ ಕೂಡ ತಾವೇ ಮುಂದುವರೆದು ಮೂದಲನೇ ಹೆಜ್ಜೆ ಇಟ್ಟು ಆಂಧ್ರ ಮುಖ್ಯಮಂತ್ರಿಗಳ ಜೊತೆಯಲ್ಲಿ ಮಹಾರಾಷ್ಟ್ರ ಮುಖ್ಯಮಂತ್ರಿಗಳ ಜೊತೆಯಲ್ಲಿ ಮಾತುಕತೆ ಆಡಿ ಈ ಒಂದು ಪರಿಸ್ಥಿತಿ ಏನಿದೆ ನಮ್ಮ ತಲೆ ಮೇಲೆ ಆಡತಕ್ಕ ಕತ್ತಿಯನ್ನು ನಿಲ್ಲಿಸುವುದಕ್ಕೆ ಏನು ಪ್ರಯತ್ನಪಡಬಹುದು ಎಂಬ ಪ್ರಯತ್ನದಲ್ಲಿ ತಾವು ಕ್ರಮ ಕೈಗೊಳ್ಳಬೇಕು, ಅದಕ್ಕೆ ಮುಂದಾಗಬೇಕು. ನೀವೇ ಮೊದಲು ಆಂಧ್ರ ಮುಖ್ಯಮಂತ್ರಿಗಳ ಜೊತೆಯಲ್ಲಿ, ಮಹಾರಾಷ್ಟ್ರ ಮುಖ್ಯಮಂತ್ರಿಗಳ ಜೊತೆಯಲ್ಲಿ ಮಾತುಕತೆ ಆಡಬೇಕು. ನನಗೇನೋ ಬಹಳ ಆಶಾದಾಯಕವಾಗಿತ್ತು. ಡಾ ಚೆನ್ನಾರೆಡ್ಡಿಯವರು ಶ್ರೀ ಶರದ್ ಪವಾರ್ ಅವರು, ಮತ್ತು ಶ್ರೀ ವೀರೇಂದ್ರ ಪಾಟೀಲ್ ಅವರು ಸೇರಿದಾಗ ನಿಜವಾಗಿಯೂ ನಮಗೆ ಅನುಕೂಲವಾಗುತ್ತದೆ ಎಂದು ಅಂದುಕೊಂಡಿದ್ದೆವು. ನನಗನ್ನಿಸುತ್ತದೆ ಈ ಸಂದರ್ಭದಲ್ಲಿ ತಾವು ಈ ಕ್ರಮವನ್ನು ಕೈಗೊಳ್ಳಬೇಕು. ಎರಡು ಸಾವಿರ ವರ್ಷ ಅತಿ ಬೇಗ ಬರುತ್ತಿದೆ. ತಾವು ಈ ವಿಧೇಯಕವನ್ನು ತಂದಿದ್ದೀರಿ. ಇದನ್ನು ನಾನು ಮುಕ್ತಕಂಠದಿಂದ ಸ್ವಾಗತಿಸುತ್ತೇನೆ. ರಾಜ್ಯ ಸರ್ಕಾರಕ್ಕೆ ಅಭಿನಂದನೆ ಸಲ್ಲಿಸುತ್ತೇನೆ. ನಿಮ್ಮ ಒಂದು ಧೈರ್ಯಕ್ಕೆ ನಾನು ಮೆಚ್ಚುತ್ತೇನೆ. ಇದು ಕನ್ನಡಿಗರ ಹಿತದೃಷ್ಟಿಯಿಂದ ಮಾಡಿದಂಥದ್ದು. ರಾಷ್ಟ್ರೀಯ ಜಲ ನೀತಿ ಇವತ್ತಿನವರೆಗೂ ಮಾಡಿಲ್ಲ. ರಾಷ್ಟ್ರೀಯ ಜಲ ನೀತಿ ಆಗಬೇಕು ಎಂದು ಕೇಂದ್ರಕ್ಕೆ ಮೊದಲಿನಿಂದಲೂ ಹೇಳುತ್ತಿದ್ದೇವೆ. ಇದರ ಬಗ್ಗೆ ಕೇಂದ್ರ ಏತಕ್ಕೆ ಗಮನ ಹರಿಸಿಲ್ಲ? ರಾಷ್ಟ್ರೀಯ ಜಲನೀತಿ ಆಗದೇ ಇಂಥ ಸಮಸ್ಯೆಗಳು ಬಗೆಹರಿಸುವುದರಲ್ಲಿ ಕೇಂದ್ರ ಸರ್ಕಾರಕ್ಕೂ ಕಷ್ಟವಾಗುತ್ತದೆ. ಆದ್ದರಿಂದ ಕೇಂದ್ರ ಸರ್ಕಾರವೂ ಸಹ ರಾಷ್ಟ್ರೀಯ ಜಲನೀತಿಯನ್ನು ರೂಪಿಸಬೇಕು ಎಂದು ಈ ಸಂದರ್ಭದಲ್ಲಿ ಹೇಳಿ ಈ ವಿಧೇಯಕವನ್ನು ತಂದಿದ್ದಕ್ಕಾಗಿ ಸರ್ಕಾರಕ್ಕೆ ಅಭಿನಂದನೆ ಸಲ್ಲಿಸಿ, ಸ್ವಾಗತಿಸಿ, ಸರ್ವಾನುಮತದಿಂದ ಈ ನಿರ್ಣಯಕ್ಕೆ ಒಪ್ಪಿಗೆ ಕೊಡುತ್ತೇವೆಂದು ಭರವಸೆ ಕೊಟ್ಟು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ) : ಮಾನ್ಯ ಉಪಾಧ್ಯಕ್ಷಿಣಿಯವರೇ, ನಮ್ಮ ರಾಜ್ಯ ಸರ್ಕಾರದವರು ವಿಶೇಷವಾಗಿ ಇವತ್ತಿನ ಪರಿಸ್ಥಿತಿಯಲ್ಲಿ ಈ ಕಾನೂನನ್ನು ಮಾಡಲಿಕ್ಕೆ ಹೊರಟಿರುವುದನ್ನು ಸಂಪೂರ್ಣವಾಗಿ ನಾನು ಸ್ವಾಗತ ಮಾಡುತ್ತೇನೆ. ಈ ಸದನದ ಹೊರಗಡೆಯೂ ಸಹ ನಮ್ಮ ಪಕ್ಷದವರು ಇದನ್ನು ಸ್ವಾಗತ ಮಾಡಿದ್ದೇವೆ. ವಿಶೇಷವಾಗಿ ನಮ್ಮ ಕಾವೇರಿ ಜಲನಯನ ಪ್ರದೇಶದ

ರೈತರ ಹಿತದೃಷ್ಟಿಯಿಂದ ಇದು ಬಹಳ ಉಪಯೋಗಕ್ಕೆ ಬರತಕ್ಕ ಒಂದು ವಿಧೇಯಕ. ನಾನು ಇದನ್ನು ಸ್ವಾಗತ ಮಾಡುತ್ತೇನೆ. ಈ ಸಂದರ್ಭದಲ್ಲಿ ಒಂದೆರಡು ಮಾತುಗಳನ್ನು ನಾನು ಈ ವೇದಿಕೆಯ ಮೂಲಕ ಹೇಳಬೇಕಾಗುತ್ತದೆ. ಮೊದಲನೆದಾಗಿ, ಕೇಂದ್ರ ಸರ್ಕಾರದಿಂದ ನಮ್ಮ ರಾಜ್ಯಕ್ಕೆ ಬಹಳ ಅನ್ಯಾಯವಾಗಿದೆ ಸ್ವಾತಂತ್ರ್ಯ ಬಂದ ನಂತರದ ದಿನಗಳಲ್ಲಿ, ಕಳೆದ ನಲವತ್ತೇಳು ವರ್ಷಗಳಲ್ಲಿ ನಮ್ಮ ರಾಜ್ಯಕ್ಕೆ ಆಗಿರತಕ್ಕ ಅನ್ಯಾಯ ಬಹಳ ಅಪಾರವಾದುದು. ಇವತ್ತು ಒಂದು ಪರಿಸ್ಥಿತಿ ಬಂದಿದೆ. ನಮ್ಮ ರಾಷ್ಟ್ರದ ಅನೇಕ ಮುಖಂಡರುಗಳು ನಮ್ಮ ಸಂವಿಧಾನದಲ್ಲಿ ಬದಲಾವಣೆ ಮಾಡಬೇಕಾಗುತ್ತದೆ. ಜೊತೆಗೆ ನಮ್ಮ ರಾಜ್ಯದ ಮತ್ತು ಕೇಂದ್ರಗಳ ಮಧ್ಯೆ ಇರತಕ್ಕ ಒಂದು ವ್ಯವಸ್ಥೆ ಏನಿದೆ, ಅದನ್ನು ಪುನರ್ ಪರಿಶೀಲನೆ ಮಾಡತಕ್ಕ ಒಂದು ಪರಿಸ್ಥಿತಿ ಅನೇಕ ಕಡೆಗಳಲ್ಲಿ ಬಂದಿದೆ ಎಂಬ ಮಾತನ್ನು ಹೇಳಿದ್ದಾರೆ. ವಿಶೇಷವಾಗಿ ಇದರಲ್ಲಿ ಹೇಳಬೇಕು ಎಂದರೆ ಒರಿಸ್ಸಾ ಮುಖ್ಯಮಂತ್ರಿಗಳಾದ ಶ್ರೀ ಬಿಜು ಪಾಟ್ನಾಯಕ್ ಅವರು ಕೆಲವು ಅಭಿಪ್ರಾಯಗಳನ್ನು ವ್ಯಕ್ತ ಮಾಡಿದ್ದಾರೆ. ರಾಜ್ಯಪಾಲರ ವ್ಯವಸ್ಥೆ, ಮತ್ತೆ ಕೇಂದ್ರದಲ್ಲಿ ಹೋಗಿ ಪ್ರತಿಯೊಂದು ರಾಜ್ಯದವರೂ ನಾವು ಮಾಡತಕ್ಕಯೋಜನೆಗಳಿಗೆ ಅವರ ಒಪ್ಪಿಗೆಯನ್ನು ಪಡೆಯತಕ್ಕದ್ದು, ಭಿಕ್ಷುಕರ ರೀತಿ ಅವರ ಹತ್ತಿರ ಹೋಗಿ ಭಿಕ್ಷಾಪಾತ್ರೆಯನ್ನು ಹಿಡಿದುಕೊಂಡು ನಿಂತುಕೊಳ್ಳತಕ್ಕದ್ದು, ಇದು ಬಹಳ ದಿವಸಗಳಿಂದ ನಡೆದುಕೊಂಡು ಬಂದಿರತಕ್ಕದ್ದು. ಇದರ ಬಗ್ಗೆ ನಾವು ಪುನರ್‌ಪರಿಶೀಲನೆ ಮಾಡತಕ್ಕ ಕಾಲ ಬಂದಿದೆ. ನಮ್ಮ ಸಂವಿಧಾನದ ಕಡೆ 2ನೇ ದೃಷ್ಟಿ ಇಟ್ಟುಕೊಂಡು ವಿಚಾರ ಮಾಡುವ ಕಾಲ ಬಂದಿದೆ. ಈಗ ಕೇಂದ್ರ ಸರ್ಕಾರದವರು ಇತ್ತೀಚೆಗೆ ಇದ್ದಕ್ಕಿದ್ದಹಾಗೆ ವಾಸ್ತವಾಂಶವನ್ನು ಮರೆತು, ಸಣ್ಣ ರೈತರು ದೊಡ್ಡ ರೈತರು ಎಂದು ವಿಂಗಡಣೆ ಮಾಡಿ, ಗೊಬ್ಬರ ಹಂಚುವುದಕ್ಕೆ ಪ್ರಯತ್ನಿಸಿದ್ದಾರೆ ಮತ್ತು ಗೊಬ್ಬರದ ಬೆಲೆಯನ್ನು ಹೆಚ್ಚಿಸುವ ನೀತಿಯನ್ನು ಪ್ರಕಟ ಮಾಡಿದರು. ಮತ್ತೆ ನಾವು ಹೋಗಿ ಗೊಬ್ಬರದ ಬೆಲೆಯನ್ನು ಕಡಮೆ ಮಾಡಬೇಕೆಂದು ಕೇಳಬೇಕು. ಯಾರಿಗೋ ಹೊಟ್ಟೆನೋವು ಬಂದರೆ ನಾವು ಇಲ್ಲಿ ಔಷಧಿಯನ್ನು ತೆಗೆದುಕೊಳ್ಳತಕ್ಕ ಪರಿಸ್ಥಿತಿ ನಮ್ಮದಾಗಿದೆ. ಕಾವೇರಿ ಜಲಾನಯನದಲ್ಲಿರುವ ನೀರನ್ನು ಉಪಯೋಗಿಸುವ ವಿಚಾರದಲ್ಲಿ ನಮ್ಮ ಸರ್ಕಾರ ಇರಲಿ, ನಿಮ್ಮ ಸರ್ಕಾರ ಇರಲಿ ಅಥವಾ ಮತ್ತೊಬ್ಬರ ಸರ್ಕಾರ ಇರಲಿ, ಈ ಯೋಜನೆಗಳನ್ನು ನಾವು ನಮ್ಮ ಸಮಯದ ಒಳಗೆ ಮಾಡದೇ ಇರುವುದಕ್ಕೆ ಕಾರಣ ಏನು? ಹಣಕಾಸಿನ ಮುಗ್ಗಟ್ಟು. ಅದು ಬಿಟ್ಟರೆ ಇನ್ನೇನೂ ಇಲ್ಲ, ತಮಿಳುನಾಡಿನವರಿಗೆ ಸ್ವಲ್ಪ ನಮಗಿಂತಲೂ ಹೆಚ್ಚಿನ ರಾಜಕೀಯ ಶಕ್ತಿ ಯಾವಾಗಲೂ ಇದೆ. ಡೆಲ್ಲಿಯಲ್ಲಿ ನಮಗಿಂತಲೂ ಹೆಚ್ಚಾಗಿ ಹಿಂದಿನಿಂದಲೂ ಎಂದರೆ ಬ್ರಿಟಿಷರ ಕಾಲದಿಂದಲೂ ಕೂಡ ಅವರದೇ ಆದ ಶಕ್ತಿಗಳನ್ನು ಉಳಿಸಿಕೊಂಡು ಬಂದಿದ್ದಾರೆ. ನಾವು ಅದನ್ನು ಮಾಡುವುದಕ್ಕೆ ಆಗಿಲ್ಲ, ಅವರಿಗೆ ಯಾವುದೇ ಒಂದು ಬಾಬತ್ತಿನಲ್ಲಿಯಾಗಲಿ ಇವತ್ತು ಸಿಕ್ಕಿರತಕ್ಕ ಸವಲತ್ತು, ಅವರಿಗೆ ಸಿಕ್ಕಿರತಕ್ಕ ಹಣ, ಅವರ ಯೋಜನೆಗಳಿಗೆ ಬೇಕಾಗಿರುವಷ್ಟು ಸೌಕರ್ಯ ನಮ್ಮ ರಾಜ್ಯಕ್ಕೆ ಸಿಕ್ಕಿಲ್ಲ. ಇದು ದುರ್ದೈವರ ಸಂಗತಿ. ಇವತ್ತಿಗೇನೋ ನಿಮ್ಮ ಪಕ್ಷದವರೇ ಕೇಂದ್ರದಲ್ಲಿ ಆಳುತ್ತಿದ್ದಾರೆ. ಅದರಿಂದಾಗಿ ಅಲ್ಲಿರತಕ್ಕ ಜನರಿಗೆ ನೋವು ಆಗಬಾರದು ಎಂದು ಹೇಳಿ ಇಲ್ಲಿ ಮಾತನಾಡುವುದು ಬೇಡ ಎಂದು ಅನಿಸಬಹುದು. ನಾವು ಆ ಕಡೆ ಇದ್ದಾಗಲೂ ನಮ್ಮದೇ ಕೇಂದ್ರ ಸರ್ಕಾರ ಇದ್ದಾಗ ನಮಗೂ ಅನಿಸಿದೆ. ಅದನ್ನು ಹೊರತುಪಡಿಸಿ ನಾವು ಮಾತನಾಡಬೇಕಾಗುತ್ತದೆ. ನಮ್ಮ ರಾಜ್ಯದ ರೈತರ ಹಿತದೃಷ್ಟಿಯನ್ನು ಇಟ್ಟುಕೊಂಡು ಆ ದಿಕ್ಕಿನಲ್ಲಿ ಇವತ್ತು ತಾವು ಮಾಡಿರತಕ್ಕ

ಮಸೂದೆಯನ್ನು ಸ್ವಾಗತ ಮಾಡಿದ್ದೇನೆ. ಈವತ್ತು ಅದನ್ನು ಧಿಕ್ಕರಿಸಿ, ಅದು ಏನೇ ಆದರೂ ಪರವಾಗಿಲ್ಲ, ನಮ್ಮ ರಾಜ್ಯದ ರೈತರ ಹಿತದೃಷ್ಟಿಯಿಂದ ಎಂದು ಏನು ಮಾಡಿದ್ದೀರಿ, ಇದನ್ನು ನಾನು ಸಂಪೂರ್ಣವಾಗಿ ಸ್ವಾಗತ ಮಾಡುತ್ತೇನೆ. ಈ ಸಂದರ್ಭದಲ್ಲಿ ಕೇಂದ್ರ ಸರ್ಕಾರದಿಂದ ನಮ್ಮ ನೀರಾವರಿ ಯೋಜನೆಗಳಿಗೆ ಬರತಕ್ಕ ಹಣ ಏನಿದೆ ನಮ್ಮ ಪ್ಲಾನ್ ಸ್ಕೀಮ್‌ಗೆ ಅದನ್ನು ಸೇರಿಸಿಕೊಳ್ಳುವುದಕ್ಕೆ ಆಗಿಲ್ಲ. ಕೃಷ್ಣ ಯೋಜನೆಗೆ ಕೇಂದ್ರ ಸರ್ಕಾರಕ್ಕಿಂತಲೂ ಹೆಚ್ಚಿಗೆ ನಮಗೆ ಬಂದಿರತಕ್ಕದ್ದು ವಿಶ್ವಬ್ಯಾಂಕಿನ ಸಹಾಯ. ಆ ವಿಶ್ವಬ್ಯಾಂಕಿನ ಸಹಾಯ ತೆಗೆದುಕೊಳ್ಳುವುದಕ್ಕೆ ಕೇಂದ್ರ ಸರ್ಕಾರದವರು ಗ್ಯಾರಂಟಿ ಕೊಟ್ಟಿದ್ದಾರೆ ಎನ್ನುವುದನ್ನು ಬಿಟ್ಟರೆ ನಮ್ಮ ರಾಜ್ಯದ ಯೋಜನೆಗಳಿಗೆ ಅಂತಹ ದೊಡ್ಡ ಪ್ರಮಾಣದಲ್ಲಿ ನಮಗೆ ಸಿಕ್ಕಿಲ್ಲ. ಬೇರೆ ಬೇರೆ ಬಾಬತ್ತಿನಲ್ಲಿ ಎಷ್ಟು ಹಣ ಸಿಕ್ಕಿದೆ ಎಂಬುದು ತಮಗೇ ಗೊತ್ತಿದೆ. ಆದುದರಿಂದ ಇವತ್ತು ನಮ್ಮ ಆ ಡೆಲ್ಲಿಯಲ್ಲಿರುವ ಯಾವುದೇ ಪಕ್ಷದ ನಾಯಕರು ಇರಲಿ ಅಥವಾ ಇವತ್ತಿನ ಆಡಳಿತವನ್ನು ನಡೆಸುವ ಮುಖಂಡರು ಯಾರೇ ಇರಲಿ, ಅವರು ಕರ್ನಾಟಕಕ್ಕೆ ಅನ್ಯಾಯವಾಗಿದೆ ಎಂದು ತಿಳಿದುಕೊಳ್ಳಬೇಕಾಗುತ್ತದೆ. ಇನ್ನು ಮೇಲಾದರೂ ಇದನ್ನು ಸರಿಮಾಡುವುದಕ್ಕೆ ನಾವು ಹೋರಾಟ ಮಾಡಬೇಕಾಗುತ್ತದೆ.

ಇದನ್ನು ರಾಜ್ಯದ ರೈತರಾಗಲೀ, ಜನರಾಗಲೀ ನೋಡಿಕೊಂಡು ಕುಳಿತುಕೊಳ್ಳುವುದಕ್ಕೆ ಸಾಧ್ಯವಿಲ್ಲ, ಇವತ್ತಲ್ಲ, ನಾಳೆ ಇದರ ವಿರುದ್ಧ ದೊಡ್ಡ ಹೋರಾಟ ನಡೆಯುವುದರಲ್ಲಿ ಯಾವುದೇ ರೀತಿಯ ಸಂಶಯವಿಲ್ಲ. ಆದ್ದರಿಂದ ಅದಷ್ಟು ಬೇಗ ಕೇಂದ್ರ ಸರ್ಕಾರದವರು ಅಥವಾ ಆಡಳಿತ ನಡೆಸತ್ತಿರುವವರು ಅದನ್ನು ತಿಳಿದುಕೊಂಡು ಹೆಚ್ಚಿನ ಸಹಾಯ ಮಾಡಿದರೆ ಅನುಕೂಲವಾಗುತ್ತದೆಂದು ನಾನು ತಿಳಿದಿದ್ದೇನೆ. ಕಾವೇರಿ ಜಲಾನಯನ ಪ್ರದೇಶಕ್ಕೆ ನಮ್ಮ ಸರ್ಕಾರದಲ್ಲೂ ನಾವು ಹೆಚ್ಚಿನ ಹಣವನ್ನು ಖರ್ಚು ಮಾಡುವುದಕ್ಕೆ ಆಗಿಲ್ಲ. ನಾವು ಸ್ವಲ್ಪ ಮಾಡಿದ್ದೇವೆ. 1979-80-81-82ಕ್ಕೆ ಹೋಲಿಕೆ ಮಾಡಿದರೆ ಅದಕ್ಕಿಂತಲೂ ಹೆಚ್ಚು ಹಣವನ್ನು ನಾವು ಕೊಟ್ಟಿದ್ದೇವೆ. ಕಳೆದ ವರ್ಷ ನೀವು ಸ್ವಲ್ಪ ಹೆಚ್ಚು ಹಣವನ್ನು ಕೊಟ್ಟಿದ್ದೀರಿ. ಆದರೆ ಅದೂ ಕೂಡ ಸಾಲುವುದಿಲ್ಲವೆಂದು ನಿಮಗೂ ಗೊತ್ತು. ಈಗ ಹೋಗುತ್ತಾ ಇರತಕ್ಕ ನೀರನ್ನು ನಾವು ತಡೆದು ಇಟ್ಟುಕೊಳ್ಳುವುದಕ್ಕೆ ಆಗದೇ ಇರಬಹುದು. ಆದರೆ ನಾವು ಕಟ್ಟಿರತಕ್ಕ ಯೋಜನೆಗಳು ಏನು ಇವೆ, ಅವುಗಳನ್ನು ಪೂರೈಸಿ ಆ ನೀರನ್ನು ಉಪಯೋಗಿಸುವುದಕ್ಕೆ ಹೆಚ್ಚಿನ ಹಣ ಬೇಕಾಗುತ್ತದೆ. ಅದನ್ನು ಯಾವುದಾದರೂ ಬಾಬತ್ತಿನಿಂದ ಕಿತ್ತು ತಾವು ಉಪಯೋಗಿಸಬೇಕಾಗುತ್ತದೆ. ತಾವು ಸುಪ್ರೀಮ್ ಕೋರ್ಟ್‌ನಲ್ಲಿ ಇದ್ದ ಸಂದರ್ಭದಲ್ಲಿ, ಟ್ರಿಬ್ಯುನಲ್ ಮುಂದೆ ಹೋದ ಸಂದರ್ಭದಲ್ಲಿ, ಎಲ್ಲಾ ಪಕ್ಷದವರನ್ನು ಕರೆಯಿಸಿ ಎಲ್ಲಾ ಹಂತದಲ್ಲಿ ತಾವು ಸಮಲೋಚನೆಯನ್ನು ಮಾಡಿದ್ದೀರಿ.

ಅದರಲ್ಲೂ ವಿಶೇಷವಾಗಿ ನಮ್ಮ ಸಂಸದೀಯ ವ್ಯವಹಾರಗಳ ಮಂತ್ರಿಗಳಾದ ಮಾನ್ಯ ವೀರಪ್ಪಮೊಯಿಲಿ ಬಹಳ ಶ್ರಮಪಟ್ಟಿದ್ದಾರೆ. ಅವರನ್ನು ಇವತ್ತು ಅಭಿನಂದಿಸಬೇಕು. ಮೊದಲಿನಿಂದಲೂ ತಾವು ಕೇವಲ ಈ ವಿಚಾರಗಳನ್ನು ಆಳವಾಗಿ ತಿಳಿದುಕೊಂಡಿರುವುದು ಅಷ್ಟೇ ಅಲ್ಲ, ಸಮರ್ಪಕವಾಗಿ ನಮ್ಮ ರಾಜ್ಯದ ಹಿತವನ್ನು ಕಾಪಾಡಲಿಕ್ಕೆ ನೀವು ಕೆಲಸಮಾಡಿದ್ದೀರಿ ನಾನು ಮೆಚ್ಚುತ್ತೇನೆ ನಿಮಗೆ ಅಭಿನಂದನೆಗಳನ್ನು ಸಹ ಈ ಸಂದರ್ಭದಲ್ಲಿ ಸಲ್ಲಿಸುತ್ತೇನೆ. ಆದರೆ ಇದೇ ಸಂದರ್ಭದಲ್ಲಿ ಮತ್ತೊಂದು ಟೀಕೆಯನ್ನು ಸಹ ನಾನು ಮಾಡಬೇಕಾಗುತ್ತದೆ. ಹಣಕಾಸನ್ನು ಕೂಡಿಸಿಕೊಳ್ಳುವುದಕ್ಕೆ ಕೂಪೇನು ಮಾಡಬೇಕು? ಅದರ ಬಗ್ಗೆ ನೀವು ಬಹಳ ದೀರ್ಘವಾಗಿ ಚಿಂತನೆಯನ್ನು ಮಾಡುವುದಕ್ಕೆ ಹೋಗಿಲ್ಲ. ಈಗ ಐದಾರು ತಿಂಗಳುಗಳಲ್ಲಿ ಯಾವ ರೀತಿ

ಹಣವನ್ನು ಒದಗಿಸುತ್ತೀರಿ ? ಹಣವನ್ನು ಪ್ರಿಂಟ್ ಮಾಡುವುದಕ್ಕಾಗುವುದಿಲ್ಲ. ಹಣವನ್ನು ಒದಗಿಸಿಬೇಕಾದರೆ ಯಾವುದಾದರೂ ಎರಡು ಕಾರ್ಯಕ್ರಮಗಳನ್ನು ಬಿಡಬೇಕಾಗುತ್ತದೆ. ಈಗಿರತಕ್ಕ ಒಂದೆರಡು ಬೇರೆ ಕಾರ್ಯಕ್ರಮಗಳನ್ನು ಬಿಟ್ಟು ಅಥವಾ ಇದೇ ಇಲಾಖೆಗಳಿಂದ ಹಣವನ್ನು ಕೂಡಿಸಿಕೊಂಡು ಈ ಯೋಜನೆಗಳನ್ನು ಏನು ಮುಗಿಸಬೇಕಾಗುತ್ತದೆ. ಅದಕ್ಕೆ ನಮ್ಮ ಹೈಪವರ್ ಕಮಿಟಿಯವರು ವಿಚಾರ ಮಾಡುವುದಕ್ಕೆ ಪ್ರಾರಂಭ ಮಾಡಬೇಕೆಂದು ಕೇಳಿದ್ದೇನೆ. ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತೇನೆ. ಕೆಲವೊಂದು ಯೋಜನೆಗಳನ್ನು ಬಿಡಲಿಕ್ಕೆ ನಾವು ಒಂದಲ್ಲ ಒಂದು ಹಂತದಲ್ಲಿ ವಿಚಾರ ಮಾಡಬೇಕಾಗುತ್ತದೆ. ನಾನು ಹಿಂದುಳಿದವರ ಬಗ್ಗೆ, ಅಲ್ಪಸಂಖ್ಯಾತರ ಬಗ್ಗೆ, ಪರಿಶಿಷ್ಟ ಜಾತಿಯವರ ಬಗ್ಗೆ ಬೇರೆ ಮುಖಂಡರುಗಳ ರೀತಿಯಲ್ಲಿ ಅಭಿಮಾನವನ್ನು ಇಟ್ಟುಕೊಂಡಿದ್ದೇನೆ. ಅವರ ಕಾರ್ಯಕ್ರಮಗಳನ್ನು ಮೊಟಕು ಮಾಡಬೇಕೆಂದು ನಾನು ಹೇಳುವುದಿಲ್ಲ. ಆದರೆ ರಾಜ್ಯದ ಹಿತದೃಷ್ಟಿಯಿಂದ ಎಲ್ಲಾದರೊಂದು ಕಡೆಯಿಂದ ನಾವು 50 ಕೋಟಿಗೆ 100 ರೂಪಾಯಿಗಳನ್ನು ಎರಡು ಮೂರು ವರ್ಷಗಳಲ್ಲಿ ಸರಿ ಪ್ರತಿ ವರ್ಷ ಖರ್ಚು ಮಾಡದಿದ್ದರೆ ನಮ್ಮ ಪಾಲಿನ ನೀರನ್ನು ನಾವು ಉಪಯೋಗಿಸಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ಆ ದಿಸೆಯಲ್ಲಿ ನೀವು ಎಲ್ಲಾ ಪಕ್ಷದವರನ್ನು ಕರೆಯಿಸಿಕೊಂಡು ಒಂದು ಚಿಂತನೆಯನ್ನು ಅಧಿವೇಶನದ ಗಮನದಲ್ಲಿ ಮಾಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಇವತ್ತು ಏನು ಒಂದು ಬದಲಾವಣೆಯನ್ನು ತಾವು ಒಂದು ಅಮೆಂಡ್‌ಮೆಂಟ್ ರೂಪದಲ್ಲಿ ಕೆಲವು ಕಾನೂನನ್ನು ಬಿಕ್ಕಟ್ಟಿನಿಂದ ತಂದಿದ್ದೀರಿ ಅದನ್ನು ನಾನು ಅರ್ಥಮಾಡಿಕೊಂಡಿದ್ದೇನೆ. ನಾನು ಮತ್ತೊಮ್ಮೆ ತಾವು ಮಂಡಿಸಿರತಕ್ಕ ಮಸೂದೆಯನ್ನು ಸ್ವಾಗತ ಮಾಡಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ದಂಡು

+ ಶ್ರೀ ಎಲ್. ಆರ್. ಶಿವರಾಮೇಗೌಡ : (ನಾಗಮಂಗಲ) ಮಾನ್ಯ ಉಪಾಧ್ಯಕ್ಷರೆ, ಸರ್ಕಾರ ಸುಗ್ರೀವಾಜ್ಞೆಯನ್ನು ತರುವ ಮೂಲಕ ಬಹಳ ದಿಟ್ಟತನವನ್ನಿಟ್ಟಿದೆ ಎಂದು ಮುಕ್ತಕಂಠದಿಂದ ವಿರೋಧಪಕ್ಷದವರು ಹೇಳಿದ್ದಾರೆ. ರಾಜ್ಯದ ಜನರು ಮುಕ್ತಕಂಠದಿಂದ ಸರ್ಕಾರವನ್ನು ಪ್ರಶಂಸೆ ಮಾಡಬೇಕಾದ ಸ್ಥಿತಿಯಲ್ಲಿದ್ದಾರೆಂದು ಹೇಳಿದರೆ ತಪ್ಪಾಗಲಾರದು. ಈ ನ್ಯಾಯಮಂಡಳಿ ಬೇಕೇ ಬೇಡವೇ ಎನ್ನುವ ವಿಚಾರದಲ್ಲಿ ಇಲ್ಲೇ ಚರ್ಚೆ ನಡೆದಿದೆ. ಹೊರಗೂ ಚರ್ಚೆ ನಡೆದಿದೆ. ಕೊನೆಗೆ ನ್ಯಾಯಮಂಡಳಿಯ ಮಧ್ಯಂತರ ತೀರ್ಪಿನ ಬಗ್ಗೆ ಸಾಕಷ್ಟು ಚರ್ಚೆ ಈಗಾಗಲೇ ಆಗಿದೆ. ಆದರೆ ಇಷ್ಟೆಲ್ಲವನ್ನು ಗಮನದಲ್ಲಿಟ್ಟು ಸರ್ಕಾರ ಒಂದು ಉನ್ನತ ಸಮಿತಿಯನ್ನು ಮಾಡಿ ಈ ವಿಚಾರದಲ್ಲಿ ಈಗಾಗಲೇ ಮಾನ್ಯ ಸಿದ್ಧಾರವರು ಮತ್ತು ಮಾನ್ಯ ಪಾಟಾಲ್ ನಾಗರಾಜ್‌ರವರು ಹೇಳಿದಹಾಗೆ ನಮ್ಮ ಸಂಸದೀಯ ಸಚಿವರನ್ನು ಮತ್ತು ನಮ್ಮ ನೆಚ್ಚಿನ ನಾಯಕರಾದ ಶ್ರೀ ಬಂಗಾರಪ್ಪನವರನ್ನು ಈ ಸಂದರ್ಭದಲ್ಲಿ ಪ್ರಶಂಸೆ ಮಾಡಬೇಕಾಗುತ್ತದೆ. ಕೇಂದ್ರ ಸರ್ಕಾರದ ಕಪಿಮುಷ್ಟಿ ಇದ್ದರೂ ಸಹಿತ ಆಳುವ ಪಕ್ಷ ಕೇಂದ್ರದಲ್ಲಿದ್ದರೂ ಸಹಿತ, ಆ ಕೇಂದ್ರ ಸರ್ಕಾರದ ಮಾತಿಗೆ ಕಿವಿಗೊಡದೆ ರಾಜ್ಯದ ಹಿತವನ್ನು ಕಾಪಾಡಿದ ಸರ್ಕಾರವೆಂದು ಹೇಳಿದರೆ ಅದು ತಪ್ಪಾಗುವುದಿಲ್ಲ ಎಂಬ ಮಾತನ್ನು ನಾವು ಹೇಳಲೇಬೇಕಾಗುತ್ತದೆ. ಇವತ್ತು ರಾಜ್ಯ ಮತ್ತು ರೈತರ ಹಿತವನ್ನು ಸರ್ಕಾರ ಎಳ್ಳಷ್ಟೂ ವ್ಯತ್ಯಾಸ ಮಾಡದೆ ಕಾಪಾಡಿಕೊಂಡು ಬಂದಿದೆ ಎಂದು ಹೇಳಿದರೆ ತಪ್ಪೇನೂ ಆಗುವುದಿಲ್ಲ. ಕಾವೇರಿ ಜಲಾನಯನ ಅಚ್ಚುಕಟ್ಟು ಪ್ರದೇಶದ ಜನರ ಪರವಾಗಿ ನಾನು ಮಾನ್ಯ ಮೊಯಿಲಿಯವರನ್ನು ಮತ್ತು ಮಾನ್ಯ ಬಂಗಾರಪ್ಪನವರನ್ನು ಹೆಚ್ಚು ಪ್ರಶಂಸೆ ಮಾಡುವುದಕ್ಕೆ ಈ ಸಂದರ್ಭದಲ್ಲಿ ಇಚ್ಛಿಸುತ್ತೇನೆ. ನಾನು ಮಾನ್ಯ ನಾಗರಾಜ್‌ರವರು ಮತ್ತು ಮಾನ್ಯ ಸಿದ್ಧರವರು ಹೇಳಿದಹಾಗೆ

ಹೇಳುವುದಕ್ಕಾಗುವುದಿಲ್ಲ. ಅವರು ಹೇಳುವ ಧಾಟಿಯಲ್ಲಿ ನಾವು ಹೇಳುವುದಕ್ಕಾಗುವುದಿಲ್ಲ. ನಾವು ಹೇಳುವ ಧಾಟಿಯಲ್ಲಿ ನೀವು ಹೇಳುವುದಕ್ಕಾಗುವುದಿಲ್ಲ. ಮಾನ್ಯ ವಾಟಾಳ್‌ನಾಗರಾಜ್‌ರವರು ಮತ್ತು ಸಿಂಧ್ಯಾರವರು ಯೋಜನೆಗಳನ್ನು ಮುಗಿಸುವುದಕ್ಕೆ ಹಣವನ್ನು ಇಟ್ಟಿಲ್ಲವೆಂದು ಹೇಳಿದರು. ಕಾವೇರಿ ಬೇಸಿನ್‌ನ ಯೋಜನೆಗಳು ಮುಗಿಯಬೇಕಾದರೆ ತಾವು ಇರತಕ್ಕ ಹಣದಿಂದ ತಾವು ಹೇಳತಕ್ಕ ರೀತಿಯಲ್ಲಿ ಕೆಲಸ ಮಾಡುವುದಕ್ಕಾಗುವುದಿಲ್ಲ. ಅದರ ಬಗ್ಗೆ ನಮ್ಮದೂ ಸಹ ಒತ್ತಾಯವಿದೆ. ಉದಾಹರಣೆಗೆ ನಾಗಮಂಗಲ ತಾಲ್ಲೂಕು ಈ ಕಾವೇರಿ ಜಲಾನಯನ ಪ್ರದೇಶಗಳ ಕೆಳಗಡೆ ಬರುತ್ತದೆ. ಕಾಲುವೆ ತೋಡಿ ಒಂದು ಒಂದೂವರೆ ವರ್ಷಗಳಾಯಿತು. ನೀರು ಬಿಟ್ಟಿದ್ದರೆ ಬಹಳ ಸಂತೋಷವಾಗುತ್ತಿತ್ತು. ನಮ್ಮ ತಾಲ್ಲೂಕಿನಲ್ಲಿ ಕುಡಿಯುವ ನೀರು ಇಲ್ಲ. ಕುಡಿಯುವ ನೀರಿಗೆ ನಮ್ಮ ತಾಲ್ಲೂಕಿನಲ್ಲಿ ಬಹಳ ತೊಂದರೆಯಿದೆ. ಮಳೆ ಸರಿಯಾಗಿ ಬರದಿರುವುದರಿಂದ ಈ ಕಷ್ಟ ಬಂದಿದೆ. ಸೆಮಿ ಡ್ರೈಕ್ರಾಪ್‌ಗೆಂದು ತಾವು ನೀರು ಕೊಡುತ್ತೀರಿ. ಬರುವ ವರ್ಷದಿಂದ ಕಾಲುವೆ ಕೆಲಸ ಮುಗಿದ ಮೇಲೆ ನೀರು ಬರುತ್ತದೆ. ನಮ್ಮ ಹಿಂಭಾಗದಲ್ಲಿರತಕ್ಕವರಿಗೆ ಸೆಮಿಡ್ರೈಕ್ರಾಫ್ ನೀರು ಕೊಡಬೇಕೆಂದು ಇದ್ದರೂ ಅಲ್ಲಿ ಹೆಚ್ಚು ನೀರು ಕೊಡುತ್ತಿದ್ದೀರಿ. ಇನ್ನು ಮುಂದೆ ರಾಜ್ಯ ರಾಜ್ಯಗಳು ಹೊಡೆದಾಡಬೇಕಾಗಿಲ್ಲ, ತಾಲ್ಲೂಕು ತಾಲ್ಲೂಕುಗಳು ಹೊಡೆದಾಡುವ ಪರಿಸ್ಥಿತಿ ಬರುತ್ತದೆ. ಆದ್ದರಿಂದ ದಯಮಾಡಿ ಮಂಡ್ಯಾ ಜಿಲ್ಲೆಗೆ ಸಿಗಬೇಕಾದ ನೀರು, ನಾಗಮಂಗಲ ತಾಲ್ಲೂಕಿಗೆ ಸಿಗಬೇಕಾದ ನೀರು, ತುಮಕೂರು ಜಿಲ್ಲೆಗೆ ಸಿಗಬೇಕಾದ ನೀರನ್ನು ಸಮನಾಗಿ ಈಗಲೇ ಹಂಚಿಕೆಮಾಡಿಕೊಳ್ಳದೇ ಇದ್ದರೆ ನಾವು ಬಹಳ ಇಕ್ಕಟ್ಟಿಗೆ ಸಿಕ್ಕಿಕೊಳ್ಳತಕ್ಕ ಪರಿಸ್ಥಿತಿ ಬರುತ್ತದೆ. ನಮ್ಮ ತಾಲ್ಲೂಕಿಗೆ ಹೇಮಾವತಿ ಜಲಾಶಯದಿಂದ ಕಾಲುವೆ ಮುಖಾಂತರ ನೀರು ಬಿಟ್ಟಿದ್ದೀರಿ. ಅಥವಾ ಅದು ಮುಂದಿನ ವಾರ ಈ ಕೆಲಸ ಆಗಬಹುದು. ತಾವು ದಯಮಾಡಿ ಅದರ ಬಗ್ಗೆ ಚಿಂತನೆ ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತಾ ಈ ಮಸೂದೆಯನ್ನು ನಾವೆಲ್ಲರೂ ಬೆಂಬಲಿಸುತ್ತೇವೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಆರ್.ಎಲ್. ಜಾಲಪ್ಪ (ದೊಡ್ಡಬಳ್ಳಾಪುರ) : ಮಾನ್ಯ ಉಪಾಧ್ಯಕ್ಷಿಣಿಯವರೇ, ಏನು ಈಗ ಬಹಳ ಧೈರ್ಯದಿಂದ ಈ ರಾಜ್ಯದ ರೈತರ ಹಿತಾಸಕ್ತಿಗಳನ್ನು ಗಮನದಲ್ಲಿಟ್ಟುಕೊಂಡು ಮೊದಲು ನಾವು ಈ ನೀರನ್ನು ಉಪಯೋಗಿಸಿಕೊಳ್ಳಬೇಕು, ಇದರಿಂದ ನಮ್ಮ ರಾಜ್ಯದ ಉತ್ಪಾದನಾ ಸಾಮರ್ಥ್ಯ ಜಾಸ್ತಿಮಾಡಬೇಕೆಂದು ಏನು ಒಂದು ಬಿಲ್ ತಂದಿದ್ದಾರೆ ಮತ್ತು ಈಗ ಏನು ಒಂದು ಅಮೆಂಡ್‌ಮೆಂಟ್ ಕೂಡ ತಂದಿದ್ದಾರೆ, ಇವನ್ನು ನಾನು ಸ್ವಾಗತಿಸುತ್ತೇನೆ. ಸನ್ಮಾನ್ಯ ಸಿಂಧ್ಯರವರು ಒಂದು ವಿಷಯ ಹೇಳಿದರು. ಮಾನ್ಯ ಬಿಜುಪಟ್ನಾಯಿಕ್ ಅವರ ಒಂದು ಚಿಂತನೆ ಹಾಗೂ ಬೇರೆ ಕೆಲವು ರಾಜ್ಯಗಳಲ್ಲಿ ಕೂಡ ಈ ಚಿಂತನೆ ನಡೆಯುತ್ತಿದೆ ಎಂದು. ಮುಖ್ಯವಾಗಿ ಕಾವೇರಿಯಾಗಲೀ, ಕೃಷ್ಣಾವಾಗಲೀ, ಈ ಜಲಾನಯನಗಳಲ್ಲಿ ಬರುವ ಪ್ರದೇಶ ಅಭಿವೃದ್ಧಿಯಾಗಲೇ ಬೇಕು. ಇದಕ್ಕೆ ಯಾರದ್ದೂ ಎರಡನೇ ಮಾತಿಲ್ಲ. ಈ ನೀರನ್ನು ಉಪಯೋಗಿಸಿಕೊಳ್ಳಬೇಕು. ಇದರ ಜೊತೆಗೆ ನಾನು ಸರ್ಕಾರಕ್ಕೆ ಒಂದು ಕಿವಿಮಾತನ್ನು ಹೇಳುವುದಕ್ಕೆ ಪ್ರಯತ್ನಪಡುತ್ತೇನೆ. ನಮ್ಮ ಜಿಲ್ಲೆಗಳಲ್ಲಿ ಕೂಡ ಏನು ಬೆಂಗಳೂರು ಗ್ರಾಮಾಂತರ ಜಿಲ್ಲೆ, ತುಮಕೂರು, ಕೋಲಾರ ಮತ್ತು ಚಿತ್ರದುರ್ಗದ ಕೆಲವು ಭಾಗಗಳಲ್ಲಿ ಇವತ್ತು ಬಹಳಷ್ಟು ವ್ಯವಸಾಯವನ್ನು ಬೋರ್‌ವೆಲ್‌ಗಳನ್ನು ಹಾಕಿ ನಾವು ಮಾಡುತ್ತಿದ್ದೇವೆ. ಒಂದೊಂದು ಬೋರ್‌ವೆಲ್‌ಗೆ ಈಗ 50 ಸಾವಿರ ರೂಪಾಯಿ ಆಗುತ್ತದೆ. ಸರಾಸರಿ ಒಂದು ವರ್ಷಕ್ಕೆ ಹತ್ತರಿಂದ ಹನ್ನೆರಡು ಸಾವಿರ ಖರ್ಚು ಬೀಳುತ್ತದೆ. 50 ಸಾವಿರ ರೂಪಾಯಿಗೆ ಬಡ್ಡಿ

ವಿದ್ಯುಚ್ಛಕ್ತಿ ಖರ್ಚು, ಮೋಟಾರ್ ರಿಪೇರಿ ಮಾಡಿಸುವುದು ಎಲ್ಲಾ ಸೇರಿ ಕಡೆಯಪಕ್ಷ 10-12 ಸಾವಿರ ಆಗುತ್ತದೆ. ಯಾವಾಗ ನಾವು ಒಂದೇ ರಾಜ್ಯದ ಜನ ವರ್ಷಕ್ಕೆ ಒಂದು ಅಥವಾ ಎರಡು ಎಕರೆಗೆ ಹತ್ತು ಸಾವಿರ ರೂಪಾಯಿಗಳನ್ನು ನಾವು ಖರ್ಚು ಮಾಡಬೇಕು. ಆದರೆ ಈ ನೀರನ್ನು ಕಾವೇರಿಯಲ್ಲಾಗಲೀ, ಅಥವಾ ಇದರಲ್ಲಿ ನೀರು ಉಪಯೋಗಿಸಿಕೊಳ್ಳುತ್ತಾರೆ. ಅವರು ಈಗ 250-300 ರೂಪಾಯಿಗೆ ಒಂದು ಎಕರೆಗೆ ನೀರನ್ನು ಪಡೆಯುತ್ತಾರೆ. ಇದನ್ನು ನೋಡಿದರೆ ಒಂದು ಕಡೆ ಇಂತಹ ಪ್ರಾಜೆಕ್ಟ್‌ಗಳಲ್ಲಿ ತೊಡಗಿಸುವುದಕ್ಕೆ ನಮ್ಮಲ್ಲಿ ಹಣ ಇಲ್ಲ, ನಾವು ಈಗ ಈ ನೀರಾವರಿ ಬಾಂಡ್‌ಗಳನ್ನು ಫ್ಲೋಟ್ ಮಾಡಬೇಕೆಂದು ಹೊರಟಿದ್ದೇವೆ. ಇದನ್ನೆಲ್ಲಾ ಮಾಡಲೇಬೇಕಾಗುತ್ತದೆ, ವಿಧಿ ಇಲ್ಲ. ಯಾರು ಈ ನೀರನ್ನು ಉಪಯೋಗಿಸಿಕೊಳ್ಳುತ್ತಾರೆ, ಅವರು ಈ ರಾಜ್ಯದ ಹಿತದೃಷ್ಟಿಯಿಂದ ಹೆಚ್ಚಿಗೆ ಹಣ ಕೊಡಬೇಕಾಗುತ್ತದೆ. ಈ ಹಣವನ್ನು ಕ್ರೋಢಿಕರಿಸದೇ ಇದ್ದರೆ ಬಹುಶಃ ಜಿಲ್ಲೆಜಿಲ್ಲೆಗಳಲ್ಲಿ ಅಸಮಾಧಾನ ಬರಬಹುದು ಎಂದು ಈ ಸಮಯದಲ್ಲಿ ನಾನು ಈ ಸಂದರ್ಭದಲ್ಲಿ ಎಚ್ಚರಿಕೆ ಕೊಡುವುದಕ್ಕೆ ಇಷ್ಟಪಡುತ್ತೇನೆ. ನೀರಾವರಿ ಮಾಡುವುದಕ್ಕೆ ನಮ್ಮದ್ದು ಯಾರ್‍ಯಾರದ್ದೂ ಅಭ್ಯಂತರ ಇಲ್ಲ, ಇದನ್ನು ಮಾಡಲೇಬೇಕು. ವಿಧಿ ಇಲ್ಲ. ಹಾಗೇಯೇ ಈ ಹಿಂದುಳಿದ ಪ್ರದೇಶಗಳು ಏನಿವೆ, ಅಲ್ಲಿ ಇವತ್ತಿನ ದಿವಸ ಕುಡಿಯುವ ನೀರಿಗೆ ಬಹಳ ಕಷ್ಟ ಇದೆ. ಅಭಿವೃದ್ಧಿ ಕಾರ್ಯಕ್ರಮಗಳು ಆಗುತ್ತಿಲ್ಲ, ಗಂಗಾಕಲ್ಯಾಣ ಇಲ್ಲ, ಎಸ್‌ಎಪಿಯಲ್ಲಿ ನಾವೇನು ಪೆಡ್ಯೂಲ್ಡ್ ಕ್ಯಾಸ್ಟ್‌ನವರಿಗೆ ಏನು ಮಾಡಬೇಕೆಂದಿದ್ದೆವು ಅದನ್ನು ಹೇಳುವವರಿಲ್ಲ, ಕೇಳುವವರಿಲ್ಲ. ಇಷ್ಟೆಲ್ಲಾ ಇದ್ದರೆ ಬಹುಶಃ ಇದು ಬಹಳ ಅಸಮಾಧಾನಕ್ಕೆ ಎಡೆಕೊಡಬಹುದು ಎಂದು ಈ ಸಮಯದಲ್ಲಿ ನಾನು ಹೇಳಿ ಈ ಬಿಲ್‌ನ್ನು ನಾನು ಸ್ವಾಗತ ಮಾಡುತ್ತೇನೆ.

+ ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಉಪಾಧ್ಯಕ್ಷರೇ, ಇದಕ್ಕೆ ಉತ್ತರಗಳನ್ನು ನಮ್ಮ ಭಾರಿ ನೀರಾವರಿ ಸಚಿವರು ಕೊಡುತ್ತಾರೆ. ಎರಡು-ಮೂರು ವಿಚಾರ ಮಾತ್ರ ನಾನು ಈ ಸದನದ ಗಮನಕ್ಕೆ ತರಬೇಕೆಂದು ಇಚ್ಛಿಪಡುತ್ತೇನೆ. ಒಂದು, ಅಭಿನಂದನೆ ಈ ಸದನದ ಎಲ್ಲಾ ಸದಸ್ಯರಿಗೆ ಸಲ್ಲಬೇಕಾಗುತ್ತದೆ. ಇಡೀ ಕರ್ನಾಟಕ ರಾಜ್ಯದ ಜನತೆಗೆ ಸಲ್ಲಬೇಕಾಗುತ್ತದೆ. ಏಕೆಂದರೆ ಯಾವುದೇ ಒಂದು ರಾಜ್ಯದ ಹಿತಾಸಕ್ತಿಗಳಿಗೆ ಸಂಬಂಧಪಟ್ಟ ವಿಚಾರ ಬಂದಾಗ ಇಡೀ ಸಮುದಾಯ ಮತ್ತು ಈ ಸದನ, ಯಾವುದೇ ಸರ್ಕಾರ ಇರಲಿ, ಅದರ ಹಿಂದೆ ಬಂದಾಗ ಅದಕ್ಕೆ ಹೆಚ್ಚಿನ ಶಕ್ತಿ ಬರುತ್ತದೆ, ನೈತಿಕ ಬಲ ಬರುತ್ತದೆ. ಅದಕ್ಕಾಗಿ ಅಭಿನಂದನೆ ಎಲ್ಲರಿಗೂ ಸಲ್ಲಬೇಕಾಗುತ್ತದೆ. ಎರಡನೆಯ ವಿಚಾರ ಎಂದರೆ, ಕೆಲವು ಭಾಗದಲ್ಲಿ, ಕೆಲವು ಜನರಲ್ಲಿ ಅಂದರೆ ನಮ್ಮ ರಾಜ್ಯದ ಜನರಲ್ಲ, ಹೊರಗಿನ ಜನರಲ್ಲಿ ಇದು ನಕಾರಾತ್ಮಕವಾದಂಥ ಒಂದು ಶಾಸನ ಎನ್ನುವ ಒಂದು ಅಭಿಪ್ರಾಯ ಬಂದಿದೆ. ಮತ್ತು ಯಾವುದೋ ಒಂದು ಸಂಘರ್ಷಣೆಗೆ ಇದನ್ನು ಮಾಡಿದ್ದಾರೆ ಎಂದು ಹೇಳಿ ಈ ರೀತಿಯಾಗಿ ಸರಿಯಾದ ತಿಳುವಳಿಕೆ ಇಲ್ಲದೆ ಈ ಅಭಿಪ್ರಾಯ ರಾಜ್ಯದ ಹೊರಗಿನವರಿಗೆ ಸಾಮಾನ್ಯವಾಗಿ ಬಂದಿದೆ. ಇದು ಸರ್ವಥಾ ಸರಿಯಲ್ಲ. ಇದೊಂದು positive legislation. I am putting it. I am asserting it . It is not a negative legislature positive

ಏಕೆಂದರೆ, ಕ್ಲಾಸ್-3ರಲ್ಲಿ ಬಹಳ ಸ್ಪಷ್ಟ ಇದೆ. ಕಾವೇರಿ ಜಲಾನಯನ ನಮ್ಮಲ್ಲಿ ಇದೆ. ಆ ಜಲಾನಯನದಲ್ಲಿ ನಮ್ಮ ರೈತರು ಇದ್ದಾರೆ. ಇದರಲ್ಲಿ ಎರಡು ಭಾಗ.

ಒಂದು ಭಾಗ ಜಲಾನಯನದಲ್ಲಿರತಕ್ಕ ರೈತರಿಗೆ ನೀರನ್ನು ಒದಗಿಸತಕ್ಕಂಥಾದ್ದು, ಅದು ಅಯಾ ರಾಜ್ಯದ ಒಂದು ಹಕ್ಕು ಮತ್ತು ರಾಜ್ಯದ ಕರ್ತವ್ಯ. ಏಕೆಂದರೆ, irrigation is under the State sector. ಅದು ರಾಜ್ಯದ ಪಟ್ಟಿಯಲ್ಲಿ ಇದೆ. ಇದನ್ನು ಈ ಶಾಸನದ ಮುಖೇನ, ನಾವು ಹೆಚ್ಚು ಜವಾಬ್ದಾರಿಯನ್ನು ಹೊತ್ತಿದ್ದೇವೆ. ಸರ್ಕಾರ ಯಾರದ್ದೇ ಇರಲಿ, ಇಂತಹ ಜವಾಬ್ದಾರಿಯನ್ನು, ಕರ್ತವ್ಯವನ್ನು ನಿಭಾಯಿಸಿ ಎಂದು ನೀವು ನಮಗೆ ಹೇಳುತ್ತೀರಿ. ಒಂದು ರೀತಿಯಲ್ಲಿ ಕರ್ತವ್ಯದ ಪ್ರಜ್ಞೆಯನ್ನು ಶಾಸನದ ಮೂಲಕ, ಶಾಸನಾತ್ಮಕವಾಗಿ ನೆನಪುಮಾಡಿ, ಜ್ಞಾಪಿಸಿ, ನಾವು ಕರ್ತವ್ಯಚ್ಯುತರಾಗಬಾರದು ಎಂದು, ಇದೊಂದು ಶಾಸನ, May be a more innovative legislation. May be a legislation which may not be known. ಇದೊಂದು ಸಾಧಾರಣ Formate ನಲ್ಲಿ ಇಂತಹ ಒಂದು ಶಾಸನ ಇಲ್ಲದೇ ಇರಬಹುದು. ಇನ್ನು ಮುಂದೆ. ಮುಂದೆ ಇರಿಗೇಷನ್ ಮೇಲೆ ಅಲ್ಲ, ಅಯಾ ಸರ್ಕಾರದ ಕರ್ತವ್ಯವನ್ನು ನೆನಪು ಮಾಡಿಕೊಡುವುದಕ್ಕೆ ಶಾಸನಗಳು ಬೇಕಾಗುತ್ತದೆ. ಇದು ಖಾಂದಿ. ಇರಿಗೇಷನ್ ಮಾತ್ರವಲ್ಲ, ಇನ್ನೂ ಅನೇಕ ಸೇವಾ ಕ್ಷೇತ್ರದಲ್ಲಿ ಈ ರೀತಿಯ ಕರ್ತವ್ಯವನ್ನು, ಕರ್ತವ್ಯದ ಪ್ರಜ್ಞೆಯನ್ನು ಶಾಸನಾತ್ಮಕವಾಗಿ, ಎಚ್ಚರಗೊಳಿಸಿ, ಜಾಗೃತರಾಗತಕ್ಕಂಥ ಪರಿಸ್ಥಿತಿ ಮತ್ತು ಪ್ರಜಾಪ್ರಭುತ್ವ ಯಶಸ್ವಿಯಾಗಬೇಕಾದರೆ, ಇನ್ನೂ ಮುಂದೆ, ಮುಂದೆ ಬರಬೇಕಾಗುತ್ತದೆ. I think, I made my point very clear.

ಇದು ನಾವು ಪ್ರಥಮವಾಗಿ ಮಾಡಿರಬಹುದು. ಆದರೆ ಇಂತಹ ಜವಾಬ್ದಾರಿ, ರಾಜ್ಯಸರ್ಕಾರಗಳು, ಕೇಂದ್ರ ಸರ್ಕಾರಗಳು ನೆನಪಿಟ್ಟುಕೊಳ್ಳಬೇಕು. ಇದು ಬರೀ prophesy ಆಗಬಾರದು. ನಮ್ಮ ಕರ್ತವ್ಯದ ವಿಚಾರದಲ್ಲಿ ನಾವು ಸರ್ಕಾರದಲ್ಲಿ ಮಂತ್ರಿಗಳು, ವಿಧಾನಸಭೆಯಲ್ಲಿ ಸದಸ್ಯರು, ಅಧಿಕಾರದಲ್ಲಿರತಕ್ಕ ಅಧಿಕಾರಿಗಳು, ಇವತ್ತು ಹೇಳುತ್ತಾ ಹೋದರೆ, ಹೇಳಿಕೆಯ ಹಿಂದೆ, ಆಶ್ವಾಸನೆಗಳ ಹಿಂದೆ ಮತ್ತು ಜವಾಬ್ದಾರಿಗಳ ಹಿಂದೆ, ಅಕೌಂಟಬಿಲಿಟಿ ಇದೆ ಎಂಬುದು ಬಾರದೇ ಇದ್ದರೆ, ಪ್ರಜಾಪ್ರಭುತ್ವ, ಜಾಗೃತವಾದಂಥ ಪ್ರಜಾಪ್ರಭುತ್ವ ಆಗುವುದಿಲ್ಲ. ಅದಕ್ಕಾಗಿಯೇ ನಾನು ಹೇಳುತ್ತಿದ್ದೇನೆ. It is more positive ಎಂದು ನಮ್ಮ ಜಲಾನಯನ ಪ್ರದೇಶಗಳು ರೈತರ ರಕ್ಷಣೆ, ರೈತರಿಗೆ ನೀರು ಕೊಡತಕ್ಕ ಜವಾಬ್ದಾರಿ, ಆ ಕರ್ತವ್ಯ ಮತ್ತು ಏನು ಜಲಾನಯನ ಪ್ರದೇಶದಲ್ಲಿ ನೀರಾವರಿ ಇದೆ, ಅದು ಪ್ರಗತಿಯಾಗುತ್ತಾ ಇದೆ. ಮತ್ತು ಅದನ್ನು ಉಳಿಸಿಕೊಳ್ಳಬೇಕಾದಂಥ, ಪ್ರಿಸರ್ವ್ ಮಾಡಬೇಕಾದಂಥ, ಮೇರನೆಟೇನ್ ಮಾಡಬೇಕಾದಂಥ ಒಂದು ಶಾಸನ ಇದು ಆಗಿದೆಯೇ ಹೊರತು, ಇದು ನೆಗೆಟೀವ್ ಅಗಿಲ್ಲ. ನಾವು ತಮಿಳುನಾಡಿನವರಿಗೆ ನೀರು ಕೊಡಬಾರದು ಎಂದು ಇಲ್ಲಿ ಹೇಳಿಲ್ಲ. ನಮ್ಮ ರಕ್ಷಣೆ ನಮಗೆ . ತಮಿಳುನಾಡಿನವರ ರಕ್ಷಣೆ ತಮಿಳುನಾಡಿನವರಿಗೆ. ಈ ಮಸೂದೆ, ತಮಿಳುನಾಡಿನ ರಾಜ್ಯದ ಜನರ ವಿರುದ್ಧ ಇಲ್ಲ, ಅಥವಾ ಕೇಂದ್ರ ಸರ್ಕಾರದ ವಿರುದ್ಧವೂ ಇಲ್ಲ. ಈ ಮಸೂದೆ, ನಮ್ಮ ಕರ್ನಾಟಕ ರಾಜ್ಯದ ಜಲಾನಯನ ಪ್ರದೇಶದ ರೈತರ ಒಂದು ಹಕ್ಕನ್ನು ಸರ್ಕಾರ ಈ ರೀತಿಯಲ್ಲಿ ನಿರ್ವಹಿಸಬೇಕು ಎಂದು ಹೇಳತಕ್ಕಂಥ ಒಂದು ದಿಕ್ಕೂಚಿ. That is all. It is not an aggressive. It is a positive and not negative one. ಇದರ ಬಗ್ಗೆ ಒಂದು ವಿಚಾರ ಸ್ಪಷ್ಟೀಕರಣ ಮಾಡಬೇಕೆಂದು ಇಚ್ಛಿಸುತ್ತೇನೆ. ಮತ್ತೊಂದು ವಿಚಾರ, ಮೂರನೆಯದಾಗಿ, ನಮಗೆ ಈಗ ಇರತಕ್ಕಂಥ ಒಂದು ಪ್ರಶ್ನೆ ನಮ್ಮ ಹಕ್ಕನ್ನು ಸಂರಕ್ಷಣೆ ಮಾಡಿರುವಾಗ, ಈ ಹಕ್ಕನ್ನು ಸಂರಕ್ಷಣೆ ದೃಷ್ಟಿಯಲ್ಲಿ ಯಾವ ಕೋರ್ಟುಗಳೂ ನಮಗೆ ಅಡ್ಡಿ ಬಂದಿಲ್ಲ. No courts have come on our way. ಆದ್ದರಿಂದ ಕೋರ್ಟ್ ಶಬ್ದ ಏಕೆ ಇರಬೇಕು ಎಂದು

ನಾವು ತಿದ್ದುಪಡಿ ತಂದಿದ್ದೇವೆ. ನಮಗೆ ಯಾವ ಕೋರ್ಟೂ ಅಡ್ಡಿ ಬಂದಿಲ್ಲ, ಸಕಾರಾತ್ಮಕವಾದ ಯಾವುದೇ ಒಂದು ಸೂಚನೆ, ಯಾವುದೇ ಒಂದು ಸಲಹೆ ಈ ಮಸೂದೆಯಲ್ಲಿ ಇರಬಾರದು. ಏಕೆಂದರೆ ಕರ್ನಾಟಕ ರಾಜ್ಯದ ಜನತೆಯ ಮೂಲಕ, ಸರ್ಕಾರದ ಅಂತಃಕರಣ ಒಂದು ನಿರ್ಮಾಣವಾಗುತ್ತದೆ. ಈ ಶಾಸನದಲ್ಲಿ ಯಾವ ಕಲ್ಮಷವೂ ಇಲ, ಯಾರಿಗಾದರೂ ಮೋಸ ಮಾಡಬೇಕು, ವಂಚನೆ ಮಾಡಬೇಕೆಂಬುದು ಇಲ್ಲ. ನಮ್ಮ ಹೃದಯ ನಿರ್ಮಲವಾಗಬೇಕೆಂಬ ದೃಷ್ಟಿಯಲ್ಲಿ ಏನಾದರೂ ಸ್ವಲ್ಪ....

ಶ್ರೀ ವಾಟಾಳ್ ನಾಗರಾಜ್ : ನಿರ್ವಿಕಾರ...

ಶ್ರೀ ಎಂ. ವೀರಪ್ಪ ಮೊಯಿಲಿ : ನಿರ್ವಿಕಾರ ಎಂದು ಹೇಳುವುದಕ್ಕಾಗುವುದಿಲ್ಲ. ನಿರ್ವಿಕಾರ ಆದರೆ, ನಾವು ಸನ್ಯಾಸಿಗಳಾಗುತ್ತೇವೆ, ನಾವು ಸನ್ಯಾಸಿಗಳಲ್ಲೂ ಸ್ವಾರ್ಥಿಗಳು ನಮ್ಮ ಜನರಿಗೆ ಊಟ ಕೊಡುವುದಿಲ್ಲವೆ ಸರಿಯಾದ ಗಾಳಿ ಕೊಡುವುದು, ನೀರು ಕೊಡುವುದು, ಸರಿಯಾದ ವಾತಾವರಣವನ್ನು ಕಲ್ಪಿಸಿಕೊಡುವುದು, ಇದು ಸ್ವಾರ್ಥ ಎಂದು ಹೇಳಿದರೆ ಬಹುಶಃ ಯಾರೂ ಬದುಕುವುದಕ್ಕಾಗುವುದಿಲ್ಲ. ಇದರಲ್ಲಿ ಇಷ್ಟೇ ಇರುವುದು. ಅದುದರಿಂದ ಯಾವ ಕೋರ್ಟೂ ನಮ್ಮ ಹಕ್ಕಿನ ಸಂರಕ್ಷಣೆಗೆ ಅಡ್ಡಿಬರುವುದಿಲ್ಲ. ಟ್ರಿಬ್ಯೂನಲ್ ಅಂತಿಮ ವರದಿ ಕೊಟ್ಟಾಗಿ, ಶಾಸನಾತ್ಮಕವಾಗಿ ಅಥವಾ ಇಂಟರ್‌ಸ್ಟೇಟ್ ವಾಟರ್ ಡಿಸ್ಪ್ಯೂಟ್ ಪ್ರಕಾರಸ ಟ್ರಿಬ್ಯೂನಲ್ ಏನು ಸೆಕ್ಷನ್ 5(2) ಮತ್ತು 6 ರ ಪ್ರಕಾರ ಏನೂ ಅಂತಿಮವಾದ ತೀರ್ಪು ಕೊಡುತ್ತದೆ ಅದಕ್ಕೂ ನಾವು ಈ ಶಾಸನದೊಳಗೆ ಅಡ್ಡಿ ಬರುತ್ತಿಲ್ಲ. ಅಂತಿಮವಾದ ತೀರ್ಪಿಗೆ ನಾವು ತಲೆಬಾಗುತ್ತೇವೆ. ಟ್ರಿಬ್ಯೂನಲ್‌ಗೆ ಟ್ರಿಬ್ಯೂನಲ್‌ನಿಂದ ಏನಾದರೂ ಹೊರದರೆ ಇದ್ದರೆ ಶಾಸನಾತ್ಮಕವಾದ, ಸಂವಿಧಾನಾತ್ಮಕವಾದ ವಿಧಿಗಳೇನಿವೆ ಅದನ್ನು ಅನುಸರಿಸುತ್ತೇವೆ. ಅಂತಿಮತೀರ್ಪಿಗೆ ಈ ಶಾಸನ ಅಡ್ಡಿ ಬರುವುದಿಲ್ಲ. ಅಂತಿಮವಾದ ತೀರ್ಪಿನ ಬಗ್ಗೆ ನಮಗೆ ಈಗ ಚರ್ಚೆ ಬೇಕಾಗಿಲ್ಲ. ಅಂತಿಮವಾದ ತೀರ್ಪು ಇಷ್ಟರವರೆಗೆ ಬರಲಿಲ್ಲ. ಅಂತಿಮವಾದ ತೀರ್ಪಿಗೆ ಈ ಶಾಸನ ಅಡ್ಡಿ ಬರುವುದಿಲ್ಲ. ಅಂತಿಮವಾದ ತೀರ್ಪಿನ ಮೇಲೆ ನಮಗೆ ಏನಾದರೂ ಕೊಂದರೆ ಆದರೆ, ಏನಾದರೂ ಕ್ಲಾರಿಫಿಕೇಷನ್ ಬೇಕಾದರೆ, ಸ್ಪಷ್ಟೀಕರಣ ಬೇಕಾದರೆ, ಅದಕ್ಕೆ ಸಂವಿಧಾನಾತ್ಮಕವಾದ ವಿಧಾನಗಳೇನಿವೆ ಅದನ್ನು ಅನುಸರಿಸುವುದಕ್ಕೆ, ಸಾಧ್ಯವಾಗುತ್ತದೆ. ಈ ಬಗ್ಗೆ ದಯವಿಟ್ಟು ಈಗ ಚರ್ಚೆ ಬೇಡ. ಅದುದರಿಂದ ಮಾನ್ಯ ವಾಟಾಳ್ ನಾಗರಾಜ್‌ರವರೇ, ಈಗ ಅದರ ಬಗ್ಗೆ ಚರ್ಚೆ ಬೇಡ.

ಶ್ರೀ ವಾಟಾಳ್ ನಾಗರಾಜ್ : ಟ್ರಿಬ್ಯೂನಲ್‌ನ ಅಂತಿಮ ತೀರ್ಪಿಗೆ ನೀವು ಒಪ್ಪಿಗೆ ಕೊಡುತ್ತಿದ್ದೀರಾ?

ಶ್ರೀ ಎಂ. ವೀರಪ್ಪ ಮೊಯಿಲಿ : ಒಪ್ಪಿಗೆ ಕೊಡುತ್ತಿಲ್ಲ. ಅಂತಿಮವಾಗಿ ತೀರ್ಪು ಕೊಡುವುದಕ್ಕೆ ಈ ಶಾಸನ ಅಡ್ಡಿಬರುವುದಿಲ್ಲ. ಅಂತಿಮವಾಗಿ ತೀರ್ಪಿನ ಬಗ್ಗೆ ಸ್ಪಷ್ಟೀಕರಣ ಇರಲಿ, ಯಾವುದೇ ವಿಧಾನ ಇರಲಿ, ಅದನ್ನು ರಿಡ್ರೆಸ್ ಮಾಡುವುದಕ್ಕೆ, ನ್ಯಾಯ ಸಂಪಾದನೆ ಮಾಡುವುದಕ್ಕೆ, ಸಂವಿಧಾನತ್ಮಾಕ್ರವಾದ ವಿಧಾನಗಳಿವೆ. ಸರಕಾರಕ್ಕೆ ಯಾವಾಗಲೂ ಅದು ಇದ್ದೇ ಇದೆ. ಅದಕ್ಕೆ ಶಾಸನದ ಮೊರೆ ಹೋಗಬೇಕಾದುದು ಇಲ್ಲ. ಈ ಶಾಸನದ ಅಗತ್ಯ ಇಲ್ಲ. ನಾವು ಈ ಶಾಸನದಲ್ಲಿ ಅದರ ಬಗ್ಗೆ ಮೊರೆ ಹೋಗುತ್ತಿಲ್ಲ. ಅದು ಪ್ರತ್ಯೇಕ. ಟ್ರಿಬ್ಯೂನಲ್‌ನ ಅಂತಿಮ ತೀರ್ಪಾಗಲೀ, ಕೋರ್ಟ್ ವಿಚಾರವಾಗಲೀ, ಆ ಪ್ರಶ್ನೆ ಇಲ್ಲಿ ಉದ್ಭವಾಗುವುದಿಲ್ಲ. ಅದುದರಿಂದ ಕೋರ್ಟ್ ವಿಚಾರದಲ್ಲಿ ಮಾತ್ರ ಇಲ್ಲಿ ತಿದ್ದುಪಡಿ

ಮಾಡಿರುತ್ತೇವೆ. ಟ್ರಿಬ್ಯೂನಲ್‌ದು ಹಾಗೇ ಉಳಿಯುತ್ತದೆ. ಟ್ರಿಬ್ಯೂನಲ್ ಕೊಟ್ಟಂತಹ ಮಧ್ಯಂತರ ತೀರ್ಪಿನ ಬಗ್ಗೆ ನಾನು ವ್ಯಾಖ್ಯಾನ ಮಾಡುವುದಿಲ್ಲ. ಅಥವಾ ನಾವು ಹೊರಡಿಸಿದಂಥ ಆರ್ಡಿನೆನ್ಸ್, ಇದರ ಮೆರಿಟ್ಸ್, ಡಿಮೆರಿಟ್ಸ್ ಅದರ ಬಗ್ಗೆ ಈಗಾಗಲೇ ಸುಪ್ರೀಂ ಕೋರ್ಟಿನಲ್ಲಿ ವಾದ ವಿವಾದಗಳು ಮುಗಿದು ಹೋಗಿವೆ. ಅದನ್ನು ತೀರ್ಪಿಗಾಗಿ ಕಾದಿರಿಸಿರುತ್ತಾರೆ. ಆದುದರಿಂದ ಸದನದಲ್ಲಿ ಅದರ ಬಗ್ಗೆ ವ್ಯಾಖ್ಯಾನ ಮಾಡತಕ್ಕದ್ದು, ಮತ್ತೊಂದು ಜಸ್ಟಿಫೈಯಬಿಲಿಟಿ, ಅಡ್ವೈಸ್ ಅದನ್ನು ನಾನು ಚರ್ಚೆ ಮಾಡುವುದಕ್ಕೆ ಹೋಗಲಿಲ್ಲ. ಆದುದರಿಂದ ಇದಕ್ಕಾಗಿ ವಂದನೆಗಳನ್ನು, ಅಭಿನಂದನೆಗಳನ್ನು ಈ ಸದನದ ಎಲ್ಲಾ ಸದಸ್ಯರಿಗೂ ಸಲ್ಲಿಸುತ್ತಿದ್ದೇನೆ. ಈ ವಾದ ಅಲ್ಲಿರುವುದರಿಂದ ನಾವು ಆ ಇತಿಮಿತಿಯಲ್ಲಿ ಆ ಚರ್ಚೆ ಮಾಡಿದ್ದೇವೆ. ತಾವು ಸಹಕಾರ ಕೊಟ್ಟಿದ್ದೀರಿ. ಸೌಹಾರ್ದತೆಯಿಂದ ಕೆಲಸ ಮಾಡಿದ್ದರಿಂದ ನಮ್ಮ ಮನಸ್ಸೂ ಕೂಡ ನಿರ್ಮಲವಾಗಿದೆ. ನಾವು ಯಾವುದಕ್ಕಾಗಿ ಹೋರಾಟ ಮಾಡುತ್ತಿದ್ದೇವೋ, ಅದು ನ್ಯಾಯಯುತವಾಗಿದ್ದರೆ ಜಯ ಖಂಡಿತವಾಗಿ ನಮಗೆ ಸಿಗುತ್ತದೆ. ಈ ವಿಶ್ವಾಸ ನಾವು ಯಾವಾಗಲೂ ಇಟ್ಟುಕೊಂಡಿದ್ದೇವೆ. ಇದರ ಬಗ್ಗೆ ಖಂಡತವಾಗಿ ತಾವು ವಿಶೇಷವಾದ ಸಹಕಾರ ಕೊಟ್ಟಿದ್ದೀರಿ. ಸಂಪನ್ಮೂಲದ ವಿಚಾರವನ್ನು ಸಂಬಂಧಪಟ್ಟ ಸನ್ಮಾನ್ಯ ಸಚಿವರು ಹೇಳುತ್ತಾರೆ. ತಾವು ಕೊಟ್ಟ ಸಹಕಾರಕ್ಕಾಗಿ ವಿಷೇಷವಾಗಿ ಸರಕಾರದ ವತಿಯಿಂದ ವಂದೆಗಳನ್ನು ಸಮರ್ಪಿಸುತ್ತಿದ್ದೇನೆ. ಕಾವೇರಿ ಜಲಾನಯನ ಪ್ರದೇಶ ಇರಬಹುದು. ಕೃಷ್ಣಾ ಜಲಾನಯನ ಪ್ರದೇಶ ಇರಬಹುದು, ಆ ಕಡೆಯ ರೈತರ, ಈ ಕಡೆಯ ಒಂದು ಜಲದ ಒಂದು ರಕ್ಷಣೆ ಮತ್ತು ರೈತರ ರಕ್ಷಣೆಯ ಬಗ್ಗೆ ಸರಕಾರ ಯಾವುದೇ ಕಾರ್ಯಕ್ರಮವನ್ನು ತಮ್ಮ ಸಹಕಾರದಿಂದ ತೆಗೆದುಕೊಳ್ಳುವುದಕ್ಕೆ ಸಿದ್ಧ ಇದೆ. ಯಾವಾಗಲೂ ಮಾಡುತ್ತೇವೆ ಕೃಷ್ಣಾ ಜಲಾನಯನ ವಿಚಾರದಲ್ಲಿ ಏತಕ್ಕೆ ಇಂತಹ ಒಂದು ಶಾಸನ ಮಾಡಬಾರದು ಎಂದು ಕೇಳಬಹುದು. ಆದರೆ ಅದನ್ನು ಈಗ ಚರ್ಚೆಗೆ ವಸ್ತುವನ್ನಾಗಿ ತೆಗೆದುಕೊಳ್ಳುವುದು ನಮ್ಮ ಹಿತದೃಷ್ಟಿಯಿಂದ ಒಳ್ಳೆಯದಲ್ಲ. ಏತಕ್ಕೆಂದರೆ ಇದಕ್ಕೂ ಆದಕ್ಕೂ ಬಹಳ ವ್ಯತ್ಯಾಸವಿದೆ. ಅದರಲ್ಲಿ ನಿರ್ಣಯ ಆಗಿದೆ. ಎ.ಸ್ಕೀಮ್‌ನಲ್ಲಿ ನೀರು ನಮಗೆಷ್ಟು ಹೋಗಬೇಕು, ಅವರಿಗೆಷ್ಟು ಹೋಗಬೇಕು ಎಂದು ಆಗಿದೆ. ಹೆಚ್ಚುವರಿ ನೀರಿನ ಬಗ್ಗೆ ಬಿ.ಸ್ಕೀಮ್ ಇದೆ. ಕರ್ನಾಟಕ, ಮಹಾರಾಷ್ಟ್ರ ಮತ್ತು ಆಂಧ್ರಪ್ರದೇಶ ಈ ಮೂರೂ ರಾಜ್ಯಗಳೂ ಒಪ್ಪಿದರೆ ಮಾತ್ರ ಬಿ.ಸ್ಕೀಮ್ ಅನ್ನು ಈಗ ನೋಟಿಫೈ ಮಾಡಬೇಕು. ಮೂರೂ ಜನ ಒಪ್ಪದಿದ್ದರೆ 2000 ಎ.ಡಿ. ಆದಾಗ

4-40 ಪಿ.ಎಂ.

ಈ ಶತಮಾನದ ಅಂತ್ಯದಲ್ಲಿ 'ಬಿ' ಸ್ಕೀಮ್ ಇಂಪ್ಲಿಮೆಂಟ್ ಆಗುತ್ತದೆ.

ಶ್ರೀ ವಾಟಾಳ್ ನಾಗರಾಜ್ : ಮಾತುಕತೆಗೆ ಏನಾದರೂ ಪ್ರಯತ್ನ ಪಟ್ಟಿದ್ದೀರಾ?

ಶ್ರೀ ಎಂ. ವೀರಪ್ಪ ಮೊಯಿಲಿ : ಈಗಾಗಲೇ ಪ್ರಯತ್ನ ನಡೆದಿದೆ. ತಿರುಪತಿಯಲ್ಲಿ ಮಾತುಕತೆ ಆದ ಮೇಲೆ ಮತ್ತೆ ಮಹಬಲೇಶ್ವರದಲ್ಲಿ ಮಹಾರಾಷ್ಟ್ರದ ಮಾತುಕತೆ ಮಾಡುವ ಬಗ್ಗೆ ನಿರ್ಧಾರವಾಗಿದೆ. ಮಹಾರಾ[illegible] ಮುಖ್ಯಮಂತ್ರಿಗಳು ಸರಿಯಾದ ಒಂದು ನಿರ್ದೇಶನ ಕೊಟ್ಟಾಗ ಈ ಬಗ್[illegible]ತುಕತೆಯಾಗುತ್ತದೆ. ಆದರೆ ಕೃಷ್ಣಾ ಜಲಾನಯನ ವಿಷಯದಲ್ಲಿ ಶಾಸನದ[illegible] ಬಹುಶಃ

ಈಗ ಹೇಳತಕ್ಕಂಥಾದ್ದು ಪ್ರಸಕ್ತ ಅಲ್ಲ ಅದು ಸರಿಯಲ್ಲ. ಅಲ್ಲಿ ಮತುಕತೆಗೆ ಇಟ್ಟಿರುವಾಗ ನಾವು ಇಲ್ಲಿ ಶಾಸನ ಮಾಡುತ್ತೇವೆ ಎನ್ನುವ ಸೂಚನೆ ಕೊಟ್ಟರೆ ಅದು ಯುಕ್ತವಲ್ಲ, ಸಜ್ಜನತೆಯ ದೃಷ್ಟಿಯಲ್ಲಿ ಮತ್ತು ಸೌಹಾರ್ದತೆಯ ದೃಷ್ಟಿಯಲ್ಲಿ ಅದು ಯುಕ್ತ ಅಗಲಿಕ್ಕಿಲ್ಲ, ಎಂಬು ಪ್ರಸ್ತಾಪವನ್ನು ತಮ್ಮ ಮುಂದೆ ಇಟ್ಟು ಇದರ ಬಗ್ಗೆ ಇನ್ನೂ ಹೆಚ್ಚಿನ ವಿಚಾರಗಳನ್ನು ಸನ್ಮಾನ್ಯ ಭಾರಿ ನೀರಾವರಿ ಸಚಿವರು ಹೇಳುತ್ತಾರೆ.

+ ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : (ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು) ಮಾನ್ಯ ಉಪಾಧ್ಯಕ್ಷಣೀಯವರೇ ಈಗಾಗಲೇ ವಿರೋಧಪಕ್ಷದ ನಾಯಕರು ಹಾಗೂ ಮಾನ್ಯ ಪಾಟಾಳ್ ನಾಗರಾಜ್‌ರವರು ಮಾನ್ಯ ಪಿ.ಜಿ.ಆರ್. ಸಿಂಧ್ಯರವರು ಮಾನ್ಯ ಶಿವರಾಮೇಗೌಡರು ಮತ್ತು ಮಾನ್ಯ ಜಾಲಪ್ಪನವರು ಈ ಒಂದು ವಿಧೇಯಕದ ಬಗ್ಗೆ ತಮ್ಮ ಸಂಪೂರ್ಣ ಬೆಂಬಲವನ್ನು ವ್ಯಕ್ತಪಡಿಸುತ್ತಾ ಸರ್ಕಾರದ ಕರ್ತವ್ಯವನ್ನು ಶ್ಲಾಘಿಸಿದ್ದಾರೆ. ಈಗಾಗಲೇ ಮಾನ್ಯ ಮಂತ್ರಿಗಳಾದ ವೀರಪ್ಪ ಮೊಯಿಲಿಯವರು ವಿವರವಾದಂತಹ ಸರ್ಕಾರದ ನಿಲುವು ಏನು ಇದೆ ಸರ್ಕಾರದ ಅಭಿಪ್ರಾಯ ಏನಿದೆ ಅದನ್ನೂ ಕೂಡ ಈ ಸದನದಲ್ಲಿ ಹೇಳಿದ್ದಾರೆ. ಈ ಸಂದರ್ಭದಲ್ಲಿ ಕರ್ನಾಟಕದ ಕಾವೇರಿ ಜಲಾನಯನ ಪ್ರದೇಶದ ರೈತರ ಹಿತವನ್ನು ಕಾಪಾಡುವ ದೃಷ್ಟಿಯಿಂದ ಈ ವಿಷಯವನ್ನು ಒಂದು ಅರ್ಡಿನೆನ್ಸ್ ರೂಪದಲ್ಲಿ ಮೊದಲು ತಂದು ಅದನ್ನು ಈಗ ಬಿಲ್ ರೂಪದಲ್ಲಿ ಕಳೆದ 27 ನೇ ತಾರೀಖಿಗೆ ಈ ಸದನದಲ್ಲಿ ಬಂತು. ಈ ದಿವಸ ನಾನು ಈ ಸದನದ ಒಪ್ಪಿಗೆಗಾಗಿ ಇಟ್ಟಿದ್ದೇನೆ. ಈ ಸಂದರ್ಭದಲ್ಲಿ ನಾನು ಹೇಳುವುದಾದರೆ ಈ ಸದನದ ಎಲ್ಲಾ ಸದಸ್ಯರು ಆಳುವ ಪಕ್ಷದ ಸದಸ್ಯರು ವಿರೋಧಪಕ್ಷದ ಸದಸ್ಯರು ಸಾರ್ವಜನಿಕವಾಗಿ ಸರ್ವ ಅಧಿಕಾರಿಗಳು ಪರ್ತಕರ್ತರು ಹಾಗೂ ಕರ್ನಾಟಕದಲ್ಲಿ ಇರುವ ಸಮಸ್ತ ಜನ ಸಮುದಾಯವು ಈ ಒಂದು ಹಿನ್ನೆಲೆಯಲ್ಲಿ ಈ ವಿಧೇಯಕಕ್ಕೆ ಬೆಂಬಲ ನೀಡಿದೆ. ಅವರೆಲ್ಲರಿಗೂ ಕೂಡ ನಾನು ಸರ್ಕಾರದ ಪರವಾಗಿ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಮತ್ತು ಮಾನ್ಯ ವೀರಪ್ಪ ಮೊಯಿಲಿಯವರು ಮಾನ್ಯ ವಿರೋಧಪಕ್ಷದ ನಾಯಕರು ಹಾಗೂ ಉಪನಾಯಕರು ಹೇಳಿದ ಪ್ರಕಾರ ಸಾಕಷ್ಟು ಕಾಳಜಿಯನ್ನು ವಹಿಸಿದ್ದಾರೆ. ಹಾಗೆಯೇ ಸರ್ಕಾರದ ಅಧಿಕಾರಿಗಳೂ ಕೂಡ ಬಹಳ ಕಾಳಜಿ ವಹಿಸಿದ್ದಾರೆ. ಆ ದೃಷ್ಟಿಯಿಂದ ಈ ವಿಧೇಯಕವನ್ನು ಸರ್ವಾನುಮತದಿಂದ ಈಗಾಗಲೇ ನಿರ್ಧರಿಸಿರತಕ್ಕಂಥ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ ಈ ಸಂದರ್ಭದಲ್ಲಿ ಒಂದು ಮಾತನ್ನು ನಾನು ಸ್ಮರಿಸಿಕೊಳ್ಳಬೇಕಾಗಿದೆ. ವಿಧಾನ ಸಭೆಯಲ್ಲಿ ನನ್ನ ಬೇಡಿಕೆಗಳನ್ನು ಇಟ್ಟಾಗ ನಾನು ವಿನಂತಿ ಮಾಡಿದ್ದೆ. ಸದನಕ್ಕೆ ಗೌರವ ತರುವ ಹಾಗೆ ನಾನು ಈ ಮಸೂದೆಯನ್ನು ತರುತ್ತೇನೆ ಎಂದು ನಾನು ಹೇಳಿದ್ದೆ. ಆದರೆ ದುರ್ದೈವ. ಕೆಲವು ವಿರೋಧಪಕ್ಷದ ಸದಸ್ಯರು ಈ ದಿನ ವಾಕ್‌ಔಟ್ ಮಾಡುವಂತಹ ಕಾರ್ಯಕ್ರಮ ಮಾಡಿದರು ನಾನು ಈ ಮಾತನ್ನು ಬಹಳ ನೊಂದ ಮನಸ್ಸಿನಿಂದ ಹೇಳಬೇಕಾಗಿದೆ. ಬಹಳ ವಿಶೇಷವಾದ ಸಂದರ್ಭದಲ್ಲಿ ಈ ಸದನಕ್ಕೆ ಗೌರವ ತರುವ ಹಾಗೆ ನಮ್ಮ ಸರ್ಕಾರ ನಡೆದುಕೊಳ್ಳುತ್ತದೆ ಎನ್ನುವ ಅಭಿಪ್ರಾಯ ನಾನು ವ್ಯಕ್ತ ಮಾಡಿದ್ದೆ. ಮತ್ತೊಂದು ಸಲ ಈ ಸದನದ ಎಲ್ಲ ಸದಸ್ಯರಿಗೂ ಆಳುವ ಪಕ್ಷದ ಸದಸ್ಯರಿಗೆ ಮತ್ತು ಎಲ್ಲರಿಗೂ ಕೂಡ ಈ ಸಂದರ್ಭದಲ್ಲಿ ವಂದಿಸಿ ಈ ವಿಧೇಯಕದ ಹಿನ್ನೆಲೆಯಲ್ಲಿ ಧನ್ಯವಾದಗಳನ್ನು ಹೇಳಿ ಈ ವಿಧೇಯಕವನ್ನು ಸರ್ವಾನುಮತದಿಂದ

ಪಾಸ್ ಮಾಡಿ ಕೊಡಬೇಕೆಂದು ನಾನು ಸರ್ಕಾರದ ಪರವಾಗಿ ಹಾಗೂ ನನ್ನ ಪರವಾಗಿ ಕೇಳಿಕೊಳ್ಳುತ್ತೇನೆ.

ಪರ್ಯಾಲೋಚನಾ ಪ್ರಸ್ತಾವ

ಉಪಾಧ್ಯಕ್ಷಣಿಯವರು : ಪ್ರಸ್ತಾವ ಏನೆಂದರೆ '1991ರ ಕರ್ನಾಟಕ ಕಾವೇರಿ ಜಲಾನಯನ ಪ್ರದೇಶ ನೀರಾವರಿ ಸಂರಕ್ಷಣಾ ವಿಧೇಯಕವನ್ನು ಪರ್ಯಾಲೋಚಿಸುವುದು.'

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು.

ಖಂಡ 2 ಮತ್ತು 3 ಎರಡೂ ಸೇರಿದಂತೆ.

ಉಪಾಧ್ಯಕ್ಷಿಣಿಯವರು : ಪ್ರಸ್ತಾವ ಏನೆಂದರೆ 'ಖಂಡ 2 ರಿಂದ 3 ಎರಡೂ ಸೇರಿದಂತೆ, ಈ ವಿಧೇಯಕದ ಅಂಗವಾಗಿರುತ್ತದೆ'.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

(ಖಂಡ 2 ರಿಂದ 3 ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 4

ಉಪಾಧ್ಯಕ್ಷಿಣಿಯವರು : ಖಂಡ 4 ಕ್ಕೆ ತಿದ್ದುಪಡಿಯ ಸೂಚನೆಯನ್ನು ಮಾನ್ಯ ಸಚಿವರು ಕೊಟ್ಟಿದ್ದಾರೆ. ಅವರು ತಿದ್ದುಪಡಿಯನ್ನು ಮಂಡಿಸಬೇಕು.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : 'ಖಂಡ 4ಕ್ಕೆ ಈ ಕೆಳಕಂಡ ತಿದ್ದುಪಡಿಯನ್ನು ಮಂಡಿಸುತ್ತೇನೆ. ಖಂಡ 4 ರಲ್ಲಿ ನ್ಯಾಯಾಲಯ ಅಥವಾ ಎಂಬುದನ್ನು ಒಪ್ಪತಕ್ಕದು'.

ಉಪಾಧ್ಯಕ್ಷಣಿಯವರು : ಪ್ರಸ್ತಾವ ಏನೆಂದರೆ ಖಂಡ 4ರಲ್ಲಿ ನ್ಯಾಯಲಯ ಅಥವಾ ಎಂಬುದನ್ನು ಒಪ್ಪತಕ್ಕದು ಎಂದು, ತಿದ್ದುಪಡಿಯಾದಂತೆ ಈ ವಿಧೇಯಕದ ಅಂಗವಾಗಿರುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

(ಖಂಡ 4 ತಿದ್ದುಪಡಿಯಾದ ರೂಪದಲ್ಲಿ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಗ 5 ರಿಂದ 7 ರವರೆಗೆ: ಪ್ರಸ್ತಾವ ಏನೆಂದರೆ:

ಉಪಾಧ್ಯಕ್ಷಿಣಿಯವರು : ಪ್ರಸ್ತಾವ ಏನೆಂದರೆ 'ಖಂಡ 5 ರಿಂದ 7 ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ'.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 5 ರಿಂದ 7 ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಮೊದಲನೇ ಖಂಡ ಇತ್ಯಾದಿ

ಉಪಾಧ್ಯಕ್ಷಿಣಿಯವರು : ಪ್ರಸ್ತಾವ ಏನೆಂದರೆ ಮೊದಲನೇ "ಖಂಡ ಧೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

(ಮೊದಲನೇ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಭಾರಿ ಮತ್ತ ಮಧ್ಯಮ ನೀರಾವರಿ ಮಂತ್ರಿಗಳು) : "1991ನೇ ಕರ್ನಾಟಕ ಕಾವೇರಿ ಜಲಾನಯನ ಪ್ರದೇಶ ನೀರಾವರಿ ಸಂರಕ್ಷಣಾ ವಿಧೇಯಕವನ್ನು ತಿದ್ದುಪಡಿಯಾದ ರೂಪದಲ್ಲಿ ಅಂಗೀಕರಿಸಬೇಕೆಂದು ಕೋರುತ್ತೇನೆ."

ಉಪಾಧ್ಯಕ್ಷಿಣಿಯವರು : ಪ್ರಸ್ತಾವ ಏನೆಂದರೆ "1991ನೇ ಕರ್ನಾಟಕ ಕಾವೇರಿ ಜಲಾನಯನ ಪ್ರದೇಶ ನೀರಾವರಿ ಸಂರಕ್ಷಣಾ ವಿಧೇಯಕವನ್ನು ತಿದ್ದು ಪಡಿಯಾದ ರೂಪದಲ್ಲಿ ಅಂಗೀಕರಿಸುವುದು".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

ಶ್ರೀ ಬಿ. ಬಸವಲಿಂಗಪ್ಪ : ಮಾನ್ಯ ಉಪಾಧ್ಯಕ್ಷರೆ, ಈ ಶಾಸನಾತ್ಮಕ ನಿರ್ಣಯದ ಬಗ್ಗೆ ಅರ್ಧಂಬರ್ಧ ಚರ್ಚೆಯಾಗಿದೆ. ಇದಕ್ಕೆ ನಾನು ಉತ್ತರ ಕೊಡಬಹುದು ಅನಿಸುತ್ತದೆ. ಯಾರಾದರೂ ಮಾತನಾಡುವುದಾದರೆ ನನ್ನ ಅಭ್ಯಂತರವಿಲ್ಲ.

ಉಪಾಧ್ಯಕ್ಷರು : ಈಗ ಮಾನ್ಯ ಏಕಾಂತಯ್ಯನವರು ಮಾತನಾಡುತ್ತೀರಾ?

ಶ್ರೀ ಹೆಚ್. ಏಕಾಂತಯ್ಯ : ಸನ್ಮಾನ್ಯ ಸಭಾಧ್ಯಕ್ಷಣಿಯವರೆ, ಅದಕ್ಕಿಂಥ ಮೊದಲು ಒಂದು ವಿಷಯವನ್ನು ನಾನು ಪ್ರಸ್ತಾಪ ಮಾಡಲಿಕ್ಕೆ ಇಷ್ಟಪಡುತ್ತೇನೆ. ತಮ್ಮ ಕಾರ್ಯಸೂಚಿಯ ಪ್ರಕಾರ 5 ಗಂಟೆಗೆ ನಿಯಮ 159 ರ ಪ್ರಕಾರ ಒಂದು ನಿರ್ಣಯವನ್ನು ತೆಗೆದುಕೊಳ್ಳಬೇಕಾಗಿದೆ. 10 ನಿಮಿಷದಲ್ಲಿ ಇದು ಆಗುವುದಿಲ್ಲ. ಅಲ್ಲಿಯವರೆಗೆ ಮಾತನಾಡಿ ಎಂದರೆ ನಾನು ಮಾತನಾಡುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಸನ್ಮಾನ್ಯ ಉಪಾಧ್ಯಕ್ಷಣಿಯವರೆ, ಸನ್ಮಾನ್ಯ ಏಕಾಂತಯ್ಯನವರು ಏನು ಸೂಚನೆ ಕೊಟ್ಟಿದ್ದಾರೆ, ಅದರ ಬಗ್ಗೆ ಇಲ್ಲಿ ಚರ್ಚೆ ಮಾಡೋಣ. ಆ ಕಡೆಯವರು ಹಾಗೂ ಈ ಸದನ ಒಪ್ಪಿದರೆ ನಾಳೆಯೂ ಸದನವನ್ನು ಮುಂದುವರಿಸಬಹುದು. ಅಂದರೆ ಬಿಸ್‌ನೆಸ್ ಅಡ್ವೈಸರಿ ಪ್ರಕಾರ ಇವತ್ತಿನವರೆಗೆ ಮಾತ್ರ ಇತ್ತು. ಆದ್ದರಿಂದ, ನಾಳೆಯೂ ಸಭೆಯನ್ನು ಮುಂದುವರಿಸೋಣ. ಈಗ ಆ ಸದನದಿಂದ ಒಂದು ಸೂಚನೆ ಬಂದಿದೆ. ಯಾವ ಬಿಲ್ ಕೂಡ ಅಲ್ಲಿ ಇಲ್ಲವೆಂದು. ಏಕೆಂದರೆ ನಾಳೆ ಬಿಲ್‌ಗಳು ಮುಗಿಯಬೇಕಾಗುತ್ತದೆ. ಆದ್ದರಿಂದ ಇವತ್ತು ನಾವು ಸ್ವಲ್ಪ ಬಿಲ್‌ಗಳನ್ನು ಇಲ್ಲಿ ಮುಗಿಸಿದರೆ ಒಳ್ಳೆಯದು. ಸನ್ಮಾನ್ಯ ಏಕಾಂತಯ್ಯನವರು ಸಹಕರಿಸಿದರೆ ನಾಳೆ ಬೆಳಿಗ್ಗೆನೇ ಅವುವ ಇಷ್ಟವನ್ನು ತೆಗೆದುಕೊಳ್ಳಬಹುದು.

ಶ್ರೀ ಹೆಚ್. ಏಕಾಂತಯ್ಯ : ನನಗೆ ಏನು ಅನುಮಾನ ಬಂದಿದೆ ಎಂದರೆ, ಬಿಲ್‌ಗಳು ಆದ ಮೇಲೆ ನಮ್ಮ ಮಾತು ಕೇಳುತ್ತಾರೋ ಇಲ್ಲವೊ?

ಉಪಾಧ್ಯಕ್ಷರು : ನಾಳೆ ಬೆಳಿಗ್ಗೆ ತೆಗೆದುಕೊಳ್ಳೋಣ.

ಶ್ರೀ ಹೆಚ್. ಏಕಾಂತಯ್ಯ : ನಾಳೆ ಬೆಳಿಗ್ಗೆ ಪ್ರಥಮವಾಗಿ ನಿರ್ಣಯ ತೆಗೆದುಕೊಳ್ಳುವ ಹಾಗಿದ್ದರೆ ನನ್ನದೇನು ಅಭ್ಯಂತರವಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಉಪಾಧ್ಯಕ್ಷಿಣಿಯವರೇ,

ಉಪಾಧ್ಯಕ್ಷಿಣಿಯವರು : ಯಾವ ವಿಷಯದ ಮೇಲೆ ತಾವು ಮಾತನಾಡುತ್ತೀರಿ? ಯಾವುದೇ ವಿಷಯವೂ ಇಲ್ಲ ಬಿಡಿ.

ಶ್ರೀ ವಾಟಾಳ್ ನಾಗರಾಜ್ : ಗ್ರಾಮೀಣಾಭಿವೃದ್ಧಿ ಸಚಿವರು ದಯಮಾಡಿಸಿದ್ದಾರೆ.

ಉಪಾಧ್ಯಕ್ಷಣಿಯವರು : ನಾನು ಈಗ ಮಾನ್ಯ ಏಕಾಂತಯ್ಯನವರನ್ನು ಕರೆದಿದ್ದೇನೆ.

ಶ್ರೀ ಡಿ.ಬಿ. ಚಂದ್ರೇಗೌಡ : ಇವತ್ತು ತಾವು ಸ್ಟೇಟ್‌ಮೆಂಟ್ ಕೊಡುತ್ತೇವೆ ಎಂದು ಹೇಳಿದ್ದೀರಿ. ಮೂರು ವಿಚಾರದ ಬಗ್ಗೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಸಂಸದೀಯ ಸಚಿವರು ದಯಮಾಡಿಸಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ : ಮಾನ್ಯ ನಾಗರಾಜ್ ಅವರೇ, ಬೆಳಿಗ್ಗೆ ಆಶ್ವಾಸನೆ ಕೊಟ್ಟ ಪ್ರಕಾರ ಎಲ್ಲಾ ಹೇಳಿಕೆಗಳನ್ನು ಕೊಡುವುದಕ್ಕೆ ನಾವು ಸಿದ್ಧರಾಗಿದ್ದೇವೆ. ಆದರೆ ಬಿಲ್ಸ್ ಸ್ವಲ್ಪ ಆಗಲಿ ಎಂದು.

ಶ್ರೀ ವಾಟಾಳ್ ನಾಗರಾಜ್ : ಅದಕ್ಕೆ ನಮ್ಮ ವಿರೋಧ ಇಲ್ಲ, ಮಾನ್ಯ ಕೆ.ಹೆಚ್. ಪಾಟೀಲರು ದಯಮಾಡಿಸಿದ್ದಾರೆ. ಅವರು ಹೇಳಿಕೆ ಕೊಡುವುದಕ್ಕೆ ತಯಾರಾಗಿ ಬಂದಿದ್ದಾರೆ. ಅವರು ಹೇಳಿಕೆ ಕೊಟ್ಟು ಬಿಟ್ಟರೆ ನಮಗೆ ಸಮಾಧಾನ ಆಗುತ್ತದೆ.

ಉಪಾಧ್ಯಕ್ಷಣಿಯವರು : ಮಾನ್ಯ ಏಕಾಂತಯ್ಯನವರು ಈಗ ತಾವು ಮುಂದುವರಿಸಿ ಸ್ಟೇಟ್‌ಮೆಂಟ್ ಆಮೇಲೆ ಮಾಡುತ್ತಾರೆ.

ಜಿಲ್ಲಾಪರಿಷತ್ ಚುನಾವಣೆಗಳನ್ನು ನಡೆಸುವ ಬಗ್ಗೆ

ಶ್ರೀ ಕೆ.ಹೆಚ್. ಪಾಟೀಲ್ : ಮಾನ್ಯ ಉಪಾಧ್ಯಕ್ಷಣಿಯವರೇ, ತಮ್ಮ ಪರವಾನಗಿಯನ್ನು ಪಡೆದು ಮಾನ್ಯ ಸದಸ್ಯರ ಮನಸ್ಸಿನಲ್ಲಿರುವ ಸಂಕೋಚ ನಿವಾರಣೆಗಾಗಿ ಒಂದು ಮಾತನ್ನು ಹೇಳುತ್ತೇನೆ. ಬಜೆಟ್ ಅಧಿವೇಶನದ ಕಾಲಕ್ಕೆ ಒಂದು ಮಾತು ಹೇಳಿದ್ದು ಅವರಿಗೆ ನೆನಪು ಇರಬಹುದು. ನಾನು ಏನು ಹೇಳಿದ್ದೆ ಅಂದರೆ ಇದೇ ಸದನದಲ್ಲಿ ಒಂದು ಬಿಲ್ಲನ್ನು ಇಡುತ್ತೇನೆ ಆ ಬಿಲ್ ಪಾಸ್ ಆದ ನಂತರ ನಾನು ಚುನಾವಣೆ ಬಗ್ಗೆ ವಿಚಾರ ಮಾಡುತ್ತೇನೆ ಎಂದು. ಬಿಲ್ ಪಾಸ್ ಆಗುವ ತನಕ ಚುನಾವಣೆ ಎಂದು ಆಗುತ್ತದೆ ಎಂದು ಹೇಳುವುದಕ್ಕೆ ಬರುವುದಿಲ್ಲ ಎಂಬ ಮಾತು ಹೇಳಿದ್ದೇನೆ. ಅದನ್ನೇ ಪೇಪರ್‌ನವರು ಬಂದು ಕೇಳಿದಾಗ ಹೇಳಿದ್ದೇನೆ. ನಾನಾಗಿಯೇ ಹೇಳುವುದಕ್ಕೆ ಹೋಗಿಲ್ಲ, ಪೇಪರ್‌ನವರು ಬಂದು ಕ್ಲಾರಿಫಿಕೇಶನ್ ಕೇಳಿದಾಗ ಹೇಳಿದ್ದೇನೆ. ಅದಕ್ಕಾಗಿ ತಮ್ಮ ಮನಸ್ಸಿಗೆ ನೋವಾಗಿದ್ದರೆ, ಕ್ಷಮೆ ಮಾಡಿ.

ಶ್ರೀ ವಾಟಾಳ್ ನಾಗರಾಜ್ : ನಾವು ಕ್ಷಮಾಪಣೆ ತಮ್ಮಿಂದ ಕೇಳುತ್ತಾ ಇಲ್ಲ. ಒಂದು ಸ್ಪಷ್ಟತೆ ಬೇಕು-ಚುನಾವಣೆ ಮಾಡುತ್ತೀರಾ ಅಥವಾ ಇಲ್ಲವೇ ಎಂದು. ನಾವು ತಮ್ಮ ಕ್ಷಮೆ ಕೇಳಿಲ್ಲ.

ಶ್ರೀ ಕೆ.ಹೆಚ್. ಪಾಟೀಲ್ : ಚುನಾವಣೆ ಆಗಬೇಕಾದರೆ ಟೈಮ್ ಬೇಕು. ಆ ಟೈಮ್ ಆಗುವ ತನಕ ಅಡ್ಮಿನಿಸ್ಟ್ರೇಟರ್ ಹಾಕುವುದು ಅನಿವಾರ್ಯ ಆಗುತ್ತದೆ. ಅದಕ್ಕಾಗಿ ಅನಿವಾರ್ಯವಾಗಿ ಆರ್ಡಿನೆನ್ಸ್ ತರಬೇಕಾಗುತ್ತದೆ. ನೀವೇ ವಿಚಾರ ಮಾಡಿ.

ಶ್ರೀ ವಾಟಾಳ್ ನಾಗರಾಜ್ : ಆಡಳಿತ ಅಧಿಕಾರಿ ನೇಮಕ ಎಂದರೆ ಚುನಾವಣೆ ಇಲ್ಲ ಎಂದರ್ಥ.